ದೆಹಲಿ ಕರ್ನಾಟಕ ಸಂಘದ

# ಅಭಿಮತ

ಏಪ್ರಿಲ್–ಮೇ 2020
ಬೆಲೆ ರೂ. 1



## ದಿಗ್ಬಂಧನದ ದಿನಗಳು




ದಿನಾಂಕ 08.03.2020 ರಂದು ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಮುಖ್ಯ ಅತಿಥಿ ಮಾನವ ಸಂಪನ್ಮೂಲ ಮಂತ್ರಾಲಯದ ಉಪನಿರ್ದೇಶಕಿ ಶ್ವೇತಾ ರಾವ್ ಅವರನ್ನು ದೆಹಲಿ ಕರ್ನಾಟಕ ಸಂಘ ಅಭಿನಂದಿಸಿತು.



ದಿನಾಂಕ 08.03.2020ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ 'ಸೀತಾಂತರಾಳ' ಏಕವ್ಯಕ್ತಿ ರಂಗಪ್ರಯೋಗ ನಡೆಯಿತು. ಈ ಸಂದರ್ಭದಲ್ಲಿ ನಿರ್ದೇಶಕ ವೈ.ಡಿ. ಬದಾಮಿ ಮತ್ತು ಕಲಾವಿದೆ ಶ್ರೀಮತಿ ಮಂಜುಳಾ ಬದಾಮಿ ಅವರನ್ನು ಅಭಿನಂದಿಸಲಾಯಿತು.

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳಿ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

ಸಂಪುಟ 30 । ಸಂಚಿಕೆ 7–8
ಏಪ್ರಿಲ್–ಮೇ 2020

## ಸಂಪಾದಕೀಯ

# ಒಂದು ಮಹಾ ಮೌನದ ಬಳಿಕ

ಗಾತ್ರದಲ್ಲಿ ವೈರಾಣುಗಳು ಬ್ಯಾಕ್ಟೀರಿಯಾಗಿಂತಲೂ ಚಿಕ್ಕದಾಗಿವೆ. ಹೀಗೆ ಇರುವ ಕೊರೊನಾ ಎಂಬ 'ಕಿರೀಟಧಾರಿ' ವೈರಾಣುವೊಂದು ಜಗತ್ತನ್ನೇ ನಡುಗಿಸಿದೆ. ಚೀನಾ ದೇಶದಲ್ಲಿ ಜನ್ಮತಾಳಿದೆ ಎನ್ನಲಾದ ಈ ವೈರಾಣು ಸರ್ವವ್ಯಾಪಿ ಎನಿಸಿಕೊಂಡಿದೆ. ಬೇರೆ ಬೇರೆ ದೇಶಗಳ ಮೂರು ಲಕ್ಷಕ್ಕೂ ಹೆಚ್ಚು ಜನರು ಮರಣ ಹೊಂದಿದ್ದಾರೆ. ಭಾರತದಲ್ಲಿ ಈಗಾಗಲೇ ಮೂರು ಸಾವಿರಕ್ಕೂ ಹೆಚ್ಚು ಜನರು ಈ ವಿಷಾಣುವಿಗೆ ಬಲಿಯಾಗಿದ್ದಾರೆ.

ಸಾಮಾಜಿಕ ಅಂತರ, ಸ್ವಚ್ಛತೆ ಮೊದಲಾದ ಮುಂಜಾಗ್ರತಾ ಕ್ರಮಗಳಿಂದ ಭಾರತ ಹೆಚ್ಚಿನ ಅಪಾಯದಿಂದ ಪಾರಾಗಿದೆ. ಈ ಸಂದರ್ಭದಲ್ಲಿ ನಮ್ಮ ಪೋಲೀಸರು ಮತ್ತು ಆರೋಗ್ಯ ವಲಯದಲ್ಲಿ ದುಡಿಯುತ್ತಿರುವ ಜನರು ಜೀವದ ಹಂಗು ತೊರೆದು ಕೆಲಸ ಮಾಡಿದ್ದಾರೆ. ಇವರೆಲ್ಲರಿಗೂ ಧನ್ಯವಾದ ಸಲ್ಲಬೇಕು.

ಜನರ ರಕ್ಷಣೆಗಾಗಿ ಸರಕಾರ ವಿಧಿಸಿದ ದಿಗ್ಬಂಧನದಿಂದ ಭಾರತ ಎರಡು ಮಾಸಗಳ ಮಹಾ ಮೌನ ಕಂಡಿದೆ. ಇಡೀ ಮಾನವ ಕುಲ ವೈರಾಣುಮುಕ್ತ ಜಗತ್ತಿನ ನಿರೀಕ್ಷೆಯಲ್ಲಿದೆ. ವೈರಾಣುಗಳ ಸಮಗ್ರ ನಿರ್ಮೂಲನೆ ಸಾಧ್ಯವೇ?.

ಪ್ರಯೋಗ ಶಾಲೆಗಳ ನಿರಂತರ ಸಂಶೋಧನೆಯಿಂದ ಹೊರಡುವ ರಸಾಯನಿಕಗಳು, ಕಾರ್ಖಾನೆಗಳ ವಿಷಯುಕ್ತ ಅನಿಲ ಮತ್ತು ದ್ರವಗಳಿಂದ ವಿಭಿನ್ನ ಬಗೆಯ ವೈರಾಣುಗಳು ಜನಿಸುತ್ತವೆ. ಆದ್ದರಿಂದ ವಾತಾವರಣದಲ್ಲಿ ವೈರಾಣುಗಳು ಹರಡದಂತೆ ತಡೆಯುವ ಉಪಾಯಗಳು ನಮ್ಮಲ್ಲಿ ಇಲ್ಲ. ಈ ವೈರಾಣುಗಳು ಮನುಕುಲವನ್ನು ಹಿಂದೆಯೂ ಕಾಡಿದೆ. ಪ್ಲೇಗು, ಸ್ಪಾನಿಶ್ ಫ್ಲೂ ಮೊದಲಾದ ಸಾಂಕ್ರಾಮಿಕ ಪಿಡುಗುಗಳು ಹಿಂದೆಯೂ ಇತ್ತು. ಮುಂದೆಯೂ ಹೊಸ ರೂಪದಲ್ಲಿ ಅವತರಿಸಬಹುದು. ಮುಂಜಾಗ್ರತೆ, ಸೂಕ್ತ ಪರೀಕ್ಷೆ ಮತ್ತು ಯೋಗ್ಯ ಚಿಕಿತ್ಸೆಗಳು ಮಾತ್ರ ಜನರನ್ನು ವೈರಾಣುಗಳಿಂದ ರಕ್ಷಿಸಬಲ್ಲದು.

ಸಾಂಕ್ರಾಮಿಕ ಪಿಡುಗುಗಳಿಂದ ಜಗತ್ತು ಅನೇಕ ಪರಿವರ್ತನೆಗಳನ್ನೂ ಕಂಡಿದೆ. ವಿಪತ್ತಿನ ಪರಿಹಾರಕ್ಕಾಗಿ ನಿರಂತರ ಅನ್ವೇಷಣೆ ನಡೆದಿದೆ. ನಂತರ ಹೊಸ ಅವಿಷ್ಕಾರಗಳು ಆಗಿವೆ.

ಭಾರತದಲ್ಲಿ ಅರ್ಥ ವ್ಯವಸ್ಥೆ ಇನ್ನಷ್ಟು ಕುಸಿಯಲಿದೆ ಎಂದು ತಜ್ಞರು ಹೇಳುತ್ತಾರೆ. ಜಗತ್ತಿನೊಂದಿಗೆ ಹೊಂದಿದ್ದ ಸಂಪರ್ಕಗಳು, ಜಾಗತೀಕರಣ ಮೊದಲಾದ ಪರಿಕಲ್ಪನೆಗಳು ಅರ್ಥ ಕಳೆದುಕೊಳ್ಳಲಿದೆ. ಭಾರತ ಇದೀಗ ಪ್ರತೀ ಗ್ರಾಮ, ಜಿಲ್ಲೆ, ರಾಜ್ಯ ಮತ್ತು ಸಮಗ್ರ ದೇಶದಲ್ಲಿ ಸ್ವಾವಲಂಬನೆ ಸಾಧಿಸಬೇಕಾಗಿದೆ. ನಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಬೇಕಿದೆ.

ಈ ಮಹಾಮಾರಿಯ ಕಾರ್ಮೋಡದ ದಿನಗಳಲ್ಲಿ ನಮ್ಮ ಸಾಂಸ್ಕೃತಿಕ ಲೋಕ ಆತಂಕ ಎದುರಿಸುತ್ತಿದೆ. ಸಾರಸ್ವತ ಲೋಕದ ದಿಗ್ಗಜರಾದ ಕವಿ ಕೆ.ಎಸ್. ನಿಸಾರ್ ಅಹಮದ್ ಮತ್ತು ನಾಟಕಕಾರ ಚಂದ್ರಕಾಂತ ಕುಸನೂರು ಅವರನ್ನು ನಾಡು ಕಳೆದುಕೊಂಡಿದೆ.

ದಿಗ್ಬಂಧನಕ್ಕೆ ಕೆಲ ದಿನಗಳ ಮೊದಲೇ ಕನ್ನಡದ ಕಟ್ಟಾಳು ಡಾ. ಪಾಟೀಲ ಪುಟ್ಟಪ್ಪ 'ಪ್ರಪಂಚ' ತೊರೆದಿದ್ದಾರೆ. ನಾಡು ನುಡಿಗೆ ಅನುಪಮ ಕೊಡುಗೆ ನೀಡಿದ ಈ ಮೂವರು ಮಹನೀಯರಿಗೆ ನಮ್ಮ ಅಂತಿಮ ನಮನಗಳು.

ಜಗತ್ತಿಗೆ ಸವಾಲಾಗಿರುವ ವೈರಾಣುಗಳ ನಿರ್ಮೂಲನೆ ಸುಲಭದ ಮಾತಲ್ಲ. ನಮ್ಮ ರಕ್ಷಣೆಗೆ ನಾವು ವೈರಾಣುಗಳೊಂದಿಗೆ ಜೀವಿಸುವುದನ್ನು ಕಲಿಯಬೇಕಾಗಿದೆ. ಜೀವನ ಶೈಲಿಯಲ್ಲೂ ಬದಲಾವಣೆ ತರಬೇಕಿದೆ.

ಒಂದು ಮಹಾ ಮೌನದ ಬಳಿಕ ದೇಶ ಸಾಮಾನ್ಯ ಸ್ಥಿತಿಗೆ ಬರಲಿದೆ. ದೇಶದ ಪ್ರಗತಿಗೆ ನಾವು ನಮ್ಮ ವೃತ್ತಿ, ಪ್ರವೃತ್ತಿಯಲ್ಲಿ ಮತ್ತೆ ತೊಡಗಿಸಿಕೊಳ್ಳುವ. ಎಲ್ಲಕ್ಕಿಂತ ನಿಮ್ಮ ಸುರಕ್ಷೆ ಮುಖ್ಯ. ನಿಮಗೆ ಶುಭವಾಗಲಿ.

ಡಾ. ಅವನೀಂದ್ರನಾಥ್ ರಾವ್

ನಮ್ಮನಮ್ಮೊಳಗೆ

# ದೆಹಲಿ ಕನ್ನಡಿಗರು ಕಂಡ ಕೊರೊನಾ

ಈಗ ಲಾಕ್‌ಡೌನ್ 4 ನ್ನು ಕೇಂದ್ರ ಸರಕಾರ ಜಾರಿಗೊಳಿಸಿದೆ. ಆಯಾಯಾ ರಾಜ್ಯ ಸರಕಾರಗಳಿಗೆ ಲಾಕ್‌ಡೌನ್‌ನ್ನು ಹಂತಹಂತವಾಗಿ ಸಡಿಲಿಸಲು ಈ ಬಾರಿ ಅನುಕೂಲ ಮಾಡಿಕೊಡಲಾಗಿದೆ. ಏನೇ ಇದ್ದರೂ ಅನವಶ್ಯಕ ಕಾರಣಗಳಿಗಾಗಿ ಮನೆಯಿಂದ ಹೊರಬರಬಾರದೆಂಬ ತಾಕೀತು ಕೂಡಾ ಇದೆ. ಸುಮಾರು ಕಳೆದ ಅರವತ್ತು ದಿನಗಳಿಂದ ನಾವೆಲ್ಲ ಬಹುಶಃ ಈ ಶತಮಾನದ ಅತ್ಯಂತ ಘೋರವಾದ ಮತ್ತು ಆಳದ ಅರಿವಿಲ್ಲದ ಕೋವಿಡ್ 19 ಎಂಬ ಮಾಹಾಮಾರಿಯ ಜತೆಗಿನ ಜಟಾಪಟಿಯಲ್ಲಿ ನಮ್ಮದೇ ಆದ ರೀತಿಯಲ್ಲಿ ತೊಡಗಿಕೊಂಡಿದ್ದೇವೆ. ಈ ಕೊರೊನಾ ಅಣುಜೀವಿಯ ಅಟ್ಟಹಾಸ ಈಗಾಗಲೇ ನಮ್ಮ ದೇಶದಲ್ಲಿ ಲಕ್ಷ ಜನರನ್ನು ತಟ್ಟಿ ಇನ್ನೂ ಮುಂದಕ್ಕೆ ದಾಪುಗಾಲಿಡುತ್ತ ಸಾಗುತ್ತಿದೆ. ಸುಮಾರು ಮೂರು ಸಾವಿರಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ. ಈ ಅಣುಜೀವಿಯೊಂದಿಗೆ ಹೊರಾಡಿ ಗೆದ್ದವರ ಸಂಖ್ಯೆಯೂ ಮೂವತ್ತು ಸಾವಿರ ದಾಟುತ್ತಿದೆ. ಈ ಕೊರೊನಾವನ್ನು ನಮ್ಮ ಶರೀರ ಖಚಿತವಾಗಿ ಎದುರಿಸಬಲ್ಲಂತೆ ಮಾಡಬಲ್ಲ ಔಷಧಿಗಳು ಜಗತ್ತಿನಾದ್ಯಂತ ಇನ್ನೂ ಅವಿಷ್ಕಾರದ ವಿವಿಧ ಹಂತಗಳಲ್ಲಿವೆ.

ಜಾಗತಿಕವಾಗಿ ಹಲವಾರು ದೇಶಗಳಲ್ಲಿನ ವಿವಿಧ ಸಮಾಜಗಳ ಬದುಕು ದುಸ್ತರತೆಯಿಂದ ಅಲ್ಲಾಡಿ ಹೋಗುತ್ತಿದೆ. ಮನೆಯಲ್ಲೇ ಭದ್ರವಾಗಿ ಕುಳಿತು ಬದುಕು ಸಾಗುತ್ತಿರುವುದನ್ನು ನೋಡುವವರದ್ದು ಒಂದು ಬಗೆಯಾದರೆ, ನಮ್ಮ ದೇಶದಲ್ಲೆ ಲಕ್ಷಾಂತರ ಜನ ಕೆಲಸ ಕಳೆದುಕೊಂಡು ಇನ್ನೂ ತಮ್ಮ ಊರು ಮನೆಗಳನ್ನು ತಲುಪಲು ಎಲ್ಲಿಲ್ಲದ ಪ್ರಯಾಸ ಮಾಡುತ್ತಿದ್ದಾರೆ. ಏರುತ್ತಿರುವ ಉತ್ತರ ಭಾರತದ ಬಿಸಿಲ ಬೇಗೆಯಲ್ಲಿ ಬೆಂದು, ಹಸಿವಿನ ಸಂಕಲೆಗೆ ಸಿಕ್ಕು ತಮ್ಮ ಬದುಕಿನ ಸೆಲೆಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಸರಕಾರಗಳು ತಮ್ಮದೇ ಆದ ರೀತಿಯಲ್ಲಿ ಈ ಎಲ್ಲರಿಗೂ ಸಹಾಯಹಸ್ತವನ್ನು ನೀಡಲು ಪ್ರಯತ್ನಿಸುತ್ತಿವೆ. ಈ ಸರಕಾರದ ಸಹಾಯಹಸ್ತ ಬರುವಲ್ಲಿ ತುಂಬಾ ತಡವಾಗಿ ಹೋಯಿತು ಎಂಬ ಅಳಲು ಎಲ್ಲಡೆ ಕೇಳಿಬರುತ್ತಿದೆ. ಕೇಂದ್ರ ಸರಕಾರ ಆಡಳಿತಾತ್ಮಕವಾಗಿ ಈ ಕೋವಿಡ್ 19 ರ ನಿಯಂತ್ರಣದ ಚುಕ್ಕಾಣಿ ಹಿಡಿದಿದ್ದರೂ, ರಾಜ್ಯ ಸರಕಾರಗಳು ಮುಂಚೂಣಿಯಲ್ಲಿ ನಿಂತು ಇದರ ವಿರುದ್ಧ ತಮ್ಮ ಎಲ್ಲ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಹೋರಾಡುತ್ತಿವೆ. ವಿಶ್ವದ ಮಟ್ಟದಲ್ಲಿ ಈ ವಿಚಿತ್ರ ಲಾಕ್‌ಡೌನ್ ಹೋರಾಟದ ಪರಿಯಿಂದಾಗಿ ದೇಶಗಳ ಆರ್ಥಿಕ ಬೆಳವಣಿಗೆಯ ಗತಿಗಳು ಯಾವ ಲೆಕ್ಕಾಚಾರಕ್ಕೂ ಸಿಗದಂತಾಗಿವೆ.

ದೆಹಲಿ ಕರ್ನಾಟಕ ಸಂಘದ ಎಲ್ಲ ಕಾರ್ಯಚಟುವಟಿಕೆಗಳನ್ನು ಕೇಂದ್ರ ಮತ್ತು ದೆಹಲಿ ರಾಜ್ಯ ಸರಕಾರದ ಆದೇಶಗಳ ಅನುಸಾರ ಮಾರ್ಚ್ 22 ರಿಂದಲೆ ಸ್ಥಗಿತಗೊಳಿಸಲಾಯಿತು. ಮುಂದಿನ ಎರಡು ತಿಂಗಳುಗಳಿಗೆ ನಿರ್ಧಾರಿತವಾದ ಎಲ್ಲ ಕಾರ್ಯಕ್ರಮಗಳನ್ನು ಮುಂದೂಡಲಾಯಿತು. ಸಂಘದ ಕಚೇರಿಯನ್ನು ನಡೆಸಿಕೊಂಡು ಹೋಗಲು ಬೇಕಾದ ಸಿಬ್ಬಂದಿಗಳನ್ನು ಮಾತ್ರ ಇರಿಸಿಕೊಳ್ಳಲು ಅನುವು ಮಾಡಿಕೊಳ್ಳಲಾಯಿತು. ದೆಹಲಿ ಮತ್ತು ಅದರ ಸುತ್ತಮುತ್ತಲಿನ ಎನ್.ಸಿ.ಆರ್. ಭಾಗದ ಕನ್ನಡಿಗರಿಗೆ ಸ್ಪಂದಿಸುವ ಕೆಲಸವನ್ನು ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಈ ಎಲ್ಲ ನಿರ್ಬಂದನೆಗಳ ನಡುವೆಯೂ ಮಾಡಿಕೊಂಡು ಬಂದದ್ದನ್ನು ಇಲ್ಲಿ ಉಲ್ಲೇಖಿಸಬೇಕು. ಉತ್ತರ ಭಾರತದ, ಅದರಲ್ಲೂ ದೆಹಲಿ ಮತ್ತು ಅದರ ಸುತ್ತಮುತ್ತಲ ಕೈಗಾರಿಕಾ ಮತ್ತು ವಾಣಿಜ್ಯ ಕಾರ್ಯಕ್ಷೇತ್ರಗಳಾದ ಗುರುಗ್ರಾಮ, ನೊಯಿಡಾ, ಫರಿದಾಬಾದ್, ಭಿವಾಡಿ ಮತ್ತಿತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ಕನ್ನಡಿಗರು ಲಾಕ್‌ಡೌನ್‌ನಿಂದಾಗಿ ಹಲವಾರು ಬಗೆಯ ಸಂಕಷ್ಟದಲ್ಲಿದ್ದಾರೆ. ಅವರೆಲ್ಲರೂ ಕೆಲಸ ಮಾಡುತ್ತಿರುವ ಸಣ್ಣ ಮತ್ತು ದೊಡ್ಡ ಕೈಗಾರಿಕಾ ಘಟಕಗಳು ಕಳೆದ ಎರಡು ತಿಂಗಳುಗಳಿಂದ ಮುಚ್ಚಿರುವುದರಿಂದ ಅವರಿಗೆಲ್ಲ ಸಿಗಬೇಕಾದ ಪೂರ್ಣ ಪ್ರಮಾಣದ ಸಂಬಳ ದೊರೆಯದೆ ಇರುವುದು ಆತಂಕಕ್ಕೆ ಕಾರಣವಾಗಿದೆ. ಹೆಚ್ಚಿನವರಿಗೆ ಏಪ್ರಿಲ್ ತಿಂಗಳ ಸಂಬಳ ದೊರೆತಿದೆ. ಆದರೆ ಮೇ ತಿಂಗಳ ಸಂಬಳಕ್ಕೆ ಕಡಿತ ಬಿದ್ದಿದೆ. ಕೆಲವರಿಗೆ ಅರ್ಧ ಸಂಬಳ, ಕಾಲಾಂಶ ಸಂಬಳ, ಇನ್ನೂ ಕೆಲವರಿಗೆ ಏನೂ ಇಲ್ಲ. ಈ ಬಗೆಯ ಅತಂತ್ರವಾದ ಬದುಕಿನಲ್ಲಿ, ಇದ್ದ ಜಾಗೆಯಲ್ಲಿ ಮನೆ ಬಾಡಿಗೆಯನ್ನು ನೀಡಲಾಗದ ಪರಿಸ್ಥಿತಿ, ಊಟ ತಿಂಡಿಗಳಿಗೂ ಕಡಿವಾಣ. ಊರಿನತ್ತ ಮುಖ ಮಾಡೋಣವೆಂದರೆ, ಮೊನ್ನೆಮೊನ್ನೆಯವರೆಗೆ ಕರ್ನಾಟಕದತ್ತ ಹೋಗಲು ಯಾವ ಪ್ರಯಾಣದ ಸವಲತ್ತುಗಳೂ ಇರಲಿಲ್ಲ.

ಈ ಬಗೆಯ ಕಷ್ಟದಲ್ಲಿ ಸಿಲುಕಿಕೊಂಡ ದೆಹಲಿ ಮತ್ತು ಸುತ್ತಮುತ್ತಲಿನ ಹಲವಾರು ಕನ್ನಡಿಗರು ನನಗೆ ಮೊಬೈಲ್ ಮೂಲಕ ಸಲಹೆ ಮತ್ತು ಸಹಾಯವನ್ನು ಕಾಲಕಾಲಕ್ಕೂ ಕೇಳಿದ್ದನ್ನು ಇಲ್ಲಿ ನಮೂದಿಸಬೇಕು. ನನ್ನ ಕೈಲಾದ ಮಟ್ಟಿಗೆ ಇವರಿಗೆಲ್ಲ ಸಹಾಯಹಸ್ತ ನೀಡಿದ ಸಮಾಧಾನ ನನಗಿದೆ. ಕೆಲವರಿಗೆ ಇದ್ದ ಸಂಬಳ ನಿಧಾನವಾಗಿ ಕರಗಿ ಹೋದ ಹಾಗೆ ಮುಂದೇನು ಮಾಡಬೇಕೆಂಬ ಚಿಂತೆ. ಇನ್ನೂ ಕೆಲವರಿಗೆ, ಇದ್ದ ಕೆಲಸವನ್ನು ಬಿಡಲಾಗದೆ, ಊರಿನತ್ತ ಹೇಗೆ ಸಾಗುವುದೆಂಬುದರ ಚಿಂತೆ. ಕೆಲವರಿಗೆ ದೆಹಲಿಯಲ್ಲಿದ್ದರೂ ಮುಂಬರುವ ತಿಂಗಳುಗಳಲ್ಲಿ ಯಾವ ರೀತಿಯಲ್ಲಿ ಬದುಕನ್ನು ಸಾಗಿಸಿಕೊಂಡು ಹೋಗುವುದೆಂಬುದರ ಚಿಂತೆ. ಇದು ಪ್ರಮುಖವಾಗಿ ಕೈಗಾರಿಕಾ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಮಸ್ಯೆಯಾದರೆ, ಸರಕಾರದ ನೌಕರಿಯಲ್ಲಿರುವವರಿಗೆ ತಿಂಗಳದ ಸಂಬಳದ ಕುರಿತಾಗಿ ಒಂದು ಬಗೆಯ ಭದ್ರತೆ ಮತ್ತು ನಿರಾಳತೆ. ಆಸ್ಪತ್ರೆಗಳಲ್ಲಿ, ದೆಹಲಿ ಪೋಲಿಸ್, ಪ್ಯಾರಾ ಮಿಲಿಟರಿ ಫೋರ್ಸ್‌ನಲ್ಲಿ, ಬ್ಯಾಂಕಿಂಗ್ ಮತ್ತು ಇತರ ಸರಕಾರಿ ಉದ್ಯೋಗದಲ್ಲಿರುವ ಕನ್ನಡಿಗರು (ಮತ್ತು ಅವರ ಕುಟುಂಬದವರು) ಈ ಧಾರುಣವಾದ ಸಮಯದಲ್ಲಿ ತಮ್ಮ ಅಮೂಲ್ಯವಾದ ಸೇವೆಯನ್ನು ಸಲ್ಲಿಸುತ್ತಿರುವುದನ್ನು ನಾವು ಇಲ್ಲಿ ನೆನೆಯಬೇಕು. ದೆಹಲಿ ಮತ್ತು ಎನ್.ಸಿ.ಆರ್.ನಲ್ಲಿರುವ ಹಲವಾರು ಕನ್ನಡಿಗರ ಹೊಟೇಲುಗಳು ಸಹ ಈಗ ಮುಚ್ಚಿರುವುದರಿಂದ ಅಲ್ಲೆಲ್ಲಾ ಕೆಲಸ ಮಾಡುತ್ತಿರುವ ನೂರಾರು ಕನ್ನಡದ ಮತ್ತು ಕನ್ನಡೇತರ ಹೊಟೇಲ್ ಕಾರ್ಮಿಕರು ಸಹ ಸಂಕಷ್ಟಗೊಳಗಾಗಿದ್ದಾರೆ. ಬಹುತೇಕ ಕನ್ನಡದ ಹೋಟೆಲ್ ಮಾಲೀಕರು ಈ ಎಲ್ಲ ಕಾರ್ಮಿಕರನ್ನು ತಮ್ಮ ಹೊಟೇಲುಗಳಲ್ಲೆ ಇರಿಸಿಕೊಂಡು ಅವರ ದಿನನಿತ್ಯದ ಬದುಕು ಸಾಗುವಂತೆ ನೋಡಿಕೊಳ್ಳುತ್ತಿರುವುದು ಶ್ಲಾಘನೀಯ.

ದೆಹಲಿಯಲ್ಲಿ ಓದಲು ಮತ್ತು ಸಂಶೋಧನೆಗೆಂದು ಬಂದ ವಿಧ್ಯಾರ್ಥಿಗಳ ಸಂಖ್ಯೆ (ದೆಹಲಿ ವಿಶ್ವವಿದ್ಯಾಲಯ, ಜವಹರಲಾಲ ನೆಹರೂ ವಿಶ್ವವಿದ್ಯಾಲಯ, ಐಐಟಿ, ಏಮ್ಸ್ ಮತ್ತು ಇತರ ಪ್ರಮುಖ ವಿದ್ಯಾ ಸಂಸ್ಥೆಗಳು) ನೂರಾರಿರಬಹುದು. ಇವರ ಜೊತೆಗೆ ಲೋಕ ಸೇವಾ ಆಯೋಗದ ಹಲವಾರು ಪರಿಕ್ಷೇಗಳಿಗೆ ಓದಲು ಬಂದ ನೂರಾರು ವಿದ್ಯಾರ್ಥಿಗಳನ್ನೂ ಸೇರಿಸಬೇಕು. ಇವರೆಲ್ಲರೂ ಮೊನ್ನೆ ಕರ್ನಾಟಕ ಸರಕಾರ ಆಯೋಜಿಸಿ ಓಡಿಸಿದ ವಿಶೇಷ ರೈಲಿನ ಮೂಲಕ ತಮ್ಮ ಕರ್ನಾಟಕದ ಗೂಡನ್ನು ಸೇರಿದ್ದಾರೆ. ಉತ್ತರ ಭಾರತದ ಪ್ರವಾಸಕ್ಕೆಂದು ಬಂದು ದೆಹಲಿಯಲ್ಲಿ ಮತ್ತು ಇತರೆಡೆ ಸಿಲುಕಿಕೊಂಡ ಕನ್ನಡಿಗರೂ ಸಹ ದೆಹಲಿಯಲ್ಲಿರುವ ಕರ್ನಾಟಕ ಸರಕಾರದ ನಿವಾಸಿ ಆಯುಕ್ತರ ಕಚೇರಿಯ ('ಸೇವಾಸಿಂದು' ಪೋರ್ಟಲ್ ಮೂಲಕ) ಸಹಯೋಗದೊಂದಿಗೆ ಕರ್ನಾಟಕಕ್ಕೆ ಮರಳಿದ್ದಾರೆ. ಇವೆಲ್ಲದರಲ್ಲಿ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಹಲವಾರು ಸದಸ್ಯರು (ಸರಕಾರದ ವಿವಿಧ ಹುದ್ದೆಯಲ್ಲಿರುವವರು) ಮುಂಚೂಣಿಯಲ್ಲಿ ನಿಂತು ಈ ಎಲ್ಲ ವ್ಯವಸ್ಥೆಗಳನ್ನು ಸಾಕಾರಗೊಳಿಸುವಲ್ಲಿ ತಮ್ಮ ಅಮೂಲ್ಯವಾದ ಸೇವೆಯನ್ನು ನೀಡಿದ್ದಾರೆ.

ಇನ್ನು ಮುಂಬರುವ ದಿನಗಳಲ್ಲಿ ಈ ಕೋವಿಡ್‌ನ ಪಸರಿಸುವಿಕೆಯ ಪ್ರಮಾಣ ದೇಶದಲ್ಲಿ ಹೆಚ್ಚುವ ಸಾಧ್ಯತೆಗಳ ಬಗ್ಗೆ ತಜ್ನರು ವಿವರಗಳನ್ನು ನೀಡುತ್ತಿದ್ದಾರೆ ಮತ್ತು ಇದಕ್ಕೆ ಬೇಕಾದ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವುದರ ಕುರಿತು ವಿವರಗಳನ್ನು ನೀಡಿದ್ದಾರೆ. ಈ ಎಲ್ಲ ಕಾರಣಗಳಿಂದಾಗಿ ಮುಂದಿನ ಕೆಲ ತಿಂಗಳುಗಳ ಕಾಲ ದೆಹಲಿ ಕರ್ನಾಟಕ ಸಂಘದಲ್ಲಿ ದೆಹಲಿ ಕನ್ನಡಿಗರನ್ನು ಸೇರಿಸಿಕೊಂಡು ಕ್ರಾರ್ಯಕ್ರಮ ಮಾಡುವುದು ಅಸಾಧ್ಯವೇ ಸರಿ. ಆದರೆ, ಇದರಿಂದ ನಾವ್ಯಾರೂ ನಿರಾಶರಾಗಬೇಕಿಲ್ಲ. ಈಗ ಉಪಲಬ್ಧವಿರುವ ಡಿಜಿಟಲ್ ವೆಬ್‌ನಾರ್ ತಂತ್ರಜ್ಞಾನದ ಮೂಲಕ ನಾವೆಲ್ಲ ಹಲವಾರು ಕಾರ್ಯಕ್ರಮಗಳಲ್ಲಿ ನಮ್ಮ ನಮ್ಮ ಮನೆಯಂಗಳದಿಂದಲೆ ಸೇರಿಕೊಳ್ಳಬಹುದು. ಈ ಕುರಿತಾಗಿ ನಾವು ಸಂಘದಲ್ಲಿ ತಯಾರಿ ಮಾಡಿಕೊಳ್ಳುತ್ತಿದ್ದೇವೆ. ಬಹುಶಃ ಶೀಘ್ರದಲ್ಲೇ ಅದರ ವಿವರಗಳನ್ನು ತಮಗೆ ತಲುಪಿಸುತ್ತೇವೆ. ಈ ಕೋವಿಡ್‌ನ್ನು ಎದುರಿಸುವುದರ ಸಂದರ್ಭದಲ್ಲಿ ನಮ್ಮನ್ನು ನಾವೇ ಸಾಮಾಜಿಕವಾಗಿ ಮತ್ತು ಸಾಂಸ್ಕ್ರತಿಕವಾಗಿ ಜೀವಂತವಾಗಿಟ್ಟುಕೊಳ್ಳುವುದು ಸಹ ಅಷ್ಟೇ ಮುಖ್ಯ ಎಂಬುದನ್ನು ನಾವು ಮರೆಯಬಾರದು. ತಾವೆಲ್ಲ (ಮತ್ತು ತಮ್ಮ ಕುಟುಂಬದವರೆಲ್ಲ) ಈ ಕೋವಿಡ್ ಕಾಲದಲ್ಲಿ ಎಲ್ಲ ಜಾಗರೂಕತಾ ನಿಯಮಗಳನ್ನು ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳುವತ್ತ ತಮ್ಮ ನಿಗಾ ಇರಲಿ ಎಂದು ಹಾರೈಸುತ್ತೇನೆ.

*ಡಾ. ವೆಂಕಟಾಚಲ ಹೆಗಡೆ*
*ಅಧ್ಯಕ್ಷರು*

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ,

ಸಾಂಕ್ರಾಮಿಕ ರೋಗ ಕೊರೊನಾ ಮಾರಕದಿಂದ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯಬೇಕಾಗಿದ್ದ ಎಲ್ಲಾ ಕಾರ್ಯಕ್ರಮಗಳು ರದ್ದಾಗಿರುತ್ತವೆ. ಏಪ್ರಿಲ್ ತಿಂಗಳಲ್ಲಿ ವಾರ್ಷಿಕ ಮಹಾಸಭೆಯು ನಡೆಯಲು ಎಲ್ಲ ತಯಾರಿಯಲ್ಲಿ ಇದ್ದ ದಿನಾಂಕವನ್ನು ನೋಟಿಸ್ ನೀಡುವ ಮೂಲಕ ಮುಂದೂಡಲಾಗಿದೆ.

ಆಟೋಟ ಸ್ಪರ್ಧೆಗಳು, ವಾರ್ಷಿಕ ಮಹಾಸಭೆ, ವಾರ್ಷಿಕೋತ್ಸವ ಈ ಎಲ್ಲ ಕಾರ್ಯಕ್ರಮಗಳನ್ನು ಮುಂದೂಡಲಾಗಿದೆ. ಭಗವಂತನ ದಯೆಯಿಂದ ದೆಹಲಿಯಲ್ಲಿ ಎಲ್ಲಾ ಕನ್ನಡಿಗರು ಸುರಕ್ಷಿತವಾಗಿದ್ದಾರೆ. ಸಣ್ಣ ಪುಟ್ಟ ಕೆಲಸ ಕಾರ್ಯಗಳಿಗೆ ನಾನು ಸ್ವತಃ ಕೈ ಜೋಡಿಸಿದ್ದೇನೆ. ನಮ್ಮ ಎಲ್ಲ ಕನ್ನಡಿಗರು ಹೊರ ರಾಜ್ಯದಿಂದ ಬಂದ ಕನ್ನಡಿಗರಿಗೆ ಸಹಾಯ ಹಸ್ತ ಮಾಡಿದ್ದಾರೆ.

ದೆಹಲಿಯಲ್ಲಿ ಬಡವರಿಗೆ ಕುಷ್ಠರೋಗದ ಕನ್ನಡದವರನ್ನು ಗುರುತಿಸಿ ಕಾಲೋನಿಗಳಲ್ಲಿ ಸ್ವತಃ ನಾಡಪ್ರಭು ಕೆಂಪೇಗೌಡ ಫೌಂಡೇಷನ್ ಮತ್ತು ಸಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ, ನವದೆಹಲಿ ಮತ್ತು ವಿ.ವಿ. ಬಿರಾದಾರ ಅವರ ಸಹಕಾರದೊಂದಿಗೆ ಒಂದು ತಿಂಗಳಿಗಾಗುವಷ್ಟು ದವಸ ಧಾನ್ಯಗಳನ್ನು ನೀಡಿ ಸಹಾಯ ಹಸ್ತವನ್ನು ನೀಡಿದ್ದೇವೆ.

ಈ ಸಾಂಕ್ರಾಮಿಕ ರೋಗ ಆದಷ್ಟು ಬೇಗನೆ ತೊಲಗಲಿ. ಬರುವ ದಿನಗಳಲ್ಲಿ ಇನ್ನೂ ಉತ್ತಮ ಕಾರ್ಯಕ್ರಮಗಳನ್ನು ಮಾಡುವ ನಿಟ್ಟಿನಲ್ಲಿ ಇರುವ ನಮಗೆ ಸರಕಾರದ ಎಲ್ಲ ನಿಯಮಗಳನ್ನು ಆಧರಿಸಿ ಬರುವ ದಿನಗಳಲ್ಲಿ ಸಂಘದಲ್ಲಿ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಲು ಮುಂದಾಗುತ್ತೇವೆ.

ಎರಡು ತಿಂಗಳ ಲಾಕ್‌ಡೌನ್‌ನಲ್ಲಿ ಎಷ್ಟೋ ಜನರಿಗೆ ತೊಂದರೆಯಾಗಿದೆ. ಆ ತೊಂದರೆಯನ್ನು ಹಂತ ಹಂತವಾಗಿ ಕೇಂದ್ರ ಸರ್ಕಾರವು ಮತ್ತು ಮಾನ್ಯ ಪ್ರಧಾನಮಂತ್ರಿಗಳು ಇಪ್ಪತ್ತು ಲಕ್ಷ ಕೋಟಿ ರೂಪಾಯಿಗಳ ಪ್ಯಾಕೇಜನ್ನು ಎಲ್ಲಾ ರಾಜ್ಯಗಳಿಗೆ ಅನುಕೂಲ ಆಗುವಂತೆ ಸಹಾಯ ಹಸ್ತ ನೀಡಿದ್ದಾರೆ. ಬರುವ ದಿನಗಳಲ್ಲಿ ಇನ್ನೂ ಉತ್ತಮವಾದ ಕೆಲಸ ಕಾರ್ಯಗಳು ನಡೆಯಲಿ.

**ಎರಡು ತಿಂಗಳ ಅಭಿಮತವನ್ನು ಒಂದೇ ಬಾರಿ ಪಿ.ಡಿ.ಎಫ್. ಮೂಲಕ ಕಳುಹಿಸಿಕೊಡುತ್ತಿದ್ದೇವೆ. ಕಾರಣ ಪೋಸ್ಟ್ ಆಫೀಸ್‌ಗಳಲ್ಲಿ ದೊಡ್ಡಮಟ್ಟದ ಪೋಸ್ಟನ್ನು ಇನ್ನು ತೆಗೆದುಕೊಳ್ಳದಿರುವುದರಿಂದ ಈ ನಿರ್ಧಾರಕ್ಕೆ ಬರಲಾಗಿದೆ.**

ಇಂತಹ ಲಾಕ್‌ಡೌನ್ ಸಮಯದಲ್ಲಿ ದೆಹಲಿಯ ಸ್ಥಳೀಯ ನಾಟಕಗಳಲ್ಲಿ ತನ್ನದೇ ಆದ ಒಂದು ಛಾಪನ್ನು ಮೂಡಿಸಿದ ದೆಹಲಿ ಪೋಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಆರ್.ಎಸ್. ಶ್ಯಾಮಸುಂದರ್‌ರವರು ಅಕಾಲ ಮರಣ ಹೊಂದಿರುತ್ತಾರೆ. ವಾರ್ಷಿಕ ಮಹಾಸಭೆಯಲ್ಲಿ ಎಲ್ಲರನ್ನು ನಗಿಸುತ್ತಾ ತಮ್ಮದೇ ಆದಂತಹ ವಿಶೇಷ ಶೈಲಿಯಲ್ಲಿ ಕೆಲವೊಂದು ಪ್ರಶ್ನೆಗಳನ್ನು ಕೇಳುತ್ತಾ, ನೇರ, ದಿಟ್ಟವಾಗಿ ನಿಷ್ಠುರವಾಗಿ ಮಾತನಾಡುತ್ತಿದ್ದ ಅಂತಹ ಆತ್ಮೀಯ ಸ್ನೇಹಿತರು ಹಾಗೂ ಅಣ್ಣನ ಸಮಾನರಾದ ಶ್ರೀ ಶ್ಯಾಮಸುಂದರ ಅವರು "ಮಾತೃದೇವೋಭವ" ತನ್ನ ತಾಯಿಗಾಗಿ, ತನ್ನ ತಾಯಿಯನ್ನು ಚೆನ್ನಾಗಿ ನೋಡಿಕೊಂಡ. ತನ್ನ ತಾಯಿಯೇ ಜೀವ, ತಾಯಿಯೇ ದೇವರು ಎಂದುಕೊಂಡು ಅಕಾಲ ಮರಣ ಹೊಂದಿದಂತಹ ಶ್ರವಣಕುಮಾರ ನಮ್ಮನ್ನು ಬಿಟ್ಟು ಅಗಲಿದ್ದಾರೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃದಯಪೂರ್ವಕ ಶ್ರದ್ಧಾಂಜಲಿ. ಇವರ ಆತ್ಮಕ್ಕೆ ಶಾಂತಿ ಸಿಗಲಿ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*




ದೆಹಲಿ ಕರ್ನಾಟಕ ಸಂಘದ
ಸುಸಜ್ಜಿತವಾದ ಆರ್ಟ್ ಗ್ಯಾಲರಿ
ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.
ಹೆಚ್ಚಿನ ಮಾಹಿತಿಗಾಗಿ
ದೆಹಲಿ ಕರ್ನಾಟಕ ಸಂಘದ
ಕಾರ್ಯಾಲಯವನ್ನು ಸಂಪರ್ಕಿಸಿರಿ.
ದೂರವಾಣಿ :
011–26109615 / 26104818

# ಮಹಿಳೆಯರಿಗೆ ಆಯ್ಕೆಯ ಸ್ವಾತಂತ್ರ್ಯ ನೀಡಿ
## -ಶ್ವೇತಾ ರಾವ್







ಮಹಿಳೆಯರಿಗೆ ಆಯ್ಕೆಯ ಸ್ವಾತಂತ್ರ್ಯ ನೀಡಬೇಕು ಎಂದು ಭಾರತ ಸರಕಾರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದಲ್ಲಿ ಉಪನಿರ್ದೇಶಕರಾಗಿರುವ ಬಿ. ಶ್ವೇತಾ ರಾವ್ ಅವರು ತಿಳಿಸಿದರು.

ಅವರು ದಿನಾಂಕ ೦೮.೦೩.೨೦೨೦ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಉದ್ಯೋಗ, ವಿವಾಹ ಸೇರಿದಂತೆ ಮಹಿಳೆಯು ಇಂದು ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಮರ್ಥಳಿದ್ದಾಳೆ. ಮಹಿಳೆ ಪ್ರಬುದ್ಧಳಾದ ಮೇಲೆ ಆಕೆಯ ಮೇಲೆ ಒತ್ತಡವನ್ನು ಹಾಕದೆ ಭಾವನೆಗಳನ್ನು ಗೌರವಿಸಬೇಕು ಎಂದು ಅವರು ಆಶಿಸಿದರು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಜಮುನಾ ಸಿ. ಮಠದ, ಕೋಶಾಧಿಕಾರಿ ಶ್ರೀಮತಿ ಆಶಾಲತ, ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್, ಸದಸ್ಯರಾದ ಶ್ರೀಮತಿ ಸುಮಿತಾ ಮುರಗೋಡ, ಶ್ರೀಮತಿ ಶೋಭಾ ಗೌಡ, ಶ್ರೀಮತಿ ಸವಿತಾ ನೆಲ್ಲಿ ಇವರು ತಮ್ಮ ಜೀವನದ ಅನುಭವಗಳನ್ನು ಹಂಚಿಕೊಂಡರು.

ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅಧ್ಯಕ್ಷತೆ ವಹಿಸಿದ ಮಾತನಾಡಿ ಶುಭ ಕೋರಿದರು.

ಜಂಟಿ ಕಾರ್ಯದರ್ಶಿ ಪೂಜಾ ರಾವ್ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು. ಸ್ಥಳೀಯ ಮಹಿಳಾ ಕಲಾವಿದರಿಂದ ನೃತ್ಯ ಪ್ರದರ್ಶನ ನಡೆಯಿತು.

ಕಾರ್ಯಕ್ರಮದ ನಂತರ ವೈ.ಡಿ. ಬದಾಮಿ ಅವರ ಪರಿಕಲ್ಪನೆ ಮತ್ತು ನಿರ್ದೇಶನದ 'ಸೀತಾಂತರಾಳ' ಏಕವ್ಯಕ್ತಿ ರಂಗಪ್ರಯೋಗ ನಡೆಯಿತು. ನಾಟಕಕಾರ ಶಶಿಕಾಂತ ಯಡಹಳ್ಳಿ ಅವರ ರಚನೆಯ ಈ ನಾಟಕ ನೋಡುಗರ ಮೆಚ್ಚುಗೆ ಪಡೆಯಿತು.

ಶ್ರೀಮತಿ ಮಂಜುಳಾ ಬದಾಮಿ ಅವರು ಸೀತೆಯಾಗಿ ಅಭಿನಯಿಸಿ ಸೀತೆ ಅನುಭವಿಸಿದ ನೋವು-ನಲಿವುಗಳನ್ನು ಮನೋಜ್ಞವಾಗಿ ರಂಗದ ಮೇಲೆ ಪ್ರದರ್ಶಿಸಿದರು.

ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಗಳು ಈ ರಂಗಪ್ರಯೋಗಕ್ಕೆ ಮಾರ್ಗದರ್ಶನ ಮಾಡಿದ್ದರು.

# ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಹಾಗೂ ಸಾಮಾಜಿಕ ಪ್ರಗತಿಶೀಲ ಸಂಸ್ಥೆಯ ನೇತೃತ್ವದಲ್ಲಿ ಕೊರೊನಾ ಸಂಕಷ್ಟಕ್ಕೆ ದೆಹಲಿ ಕನ್ನಡಿಗರಿಂದ ನೆರವು

ಕೊರೊನಾ ವೈರಸ್ ಭೀತಿ ಹಿನ್ನಲೆಯಲ್ಲಿ ಸಂಕಷ್ಟದಲ್ಲಿರುವ ಕುಟುಂಬಗಳಿಗೆ ದೆಹಲಿ ಕನ್ನಡಿಗರು ಒಂದು ತಿಂಗಳ ರೇಷನ್ ನೀಡುವ ಮೂಲಕ ಸಹಾಯ ಹಸ್ತ ನೀಡಿದ್ದಾರೆ.

ನವದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಹಾಗೂ ಸಾಮಾಜಿಕ ಪ್ರಗತಿಶೀಲ ಸಂಸ್ಥೆಯ ನೇತೃತ್ವದಲ್ಲಿ ಆರ್. ಕೆ.ಪುರಂನಲ್ಲಿರುವ ಕುಷ್ಠರೋಗಿಗಳ ಕಾಲೋನಿ ಮತ್ತು ಲಜ್‌ಪತ್‌ನಗರದಲ್ಲಿರುವ ಸುಮಾರು ನೂರು ಬಡ ಕುಟುಂಬಗಳಿಗೆ ಹತ್ತು ಕೆ.ಜಿ.ಅಕ್ಕಿ, ಹತ್ತು ಕೆ.ಜಿ.ಗೋಧಿಹಿಟ್ಟು, ಎರಡು ಲೀಟರ್ ಅಡುಗೆ ಎಣ್ಣೆ ಮತ್ತು ಐದು ಕೆ.ಜಿ.ಸಕ್ಕರೆಯನ್ನು ಒಳಗೊಂಡಂತೆ ಒಂದು ತಿಂಗಳಿಗಾಗುವಷ್ಟು ಪಡಿತರವನ್ನು ವಿತರಿಸಿ ಮಾನವೀಯತೆಯನ್ನು ಮೆರೆದಿದ್ದಾರೆ.

ಲಾಕ್‌ಡೌನ್ ಸಂದರ್ಭದಲ್ಲಿ ಈ ಸಾಮಗ್ರಿಗಳನ್ನು ತರುವಲ್ಲಿ ಹಿರಿಯ ಕನ್ನಡಿಗ ವಿ.ವಿ. ಬಿರಾದಾರ, ಆನಂದ ಮುರಗೋಡ, ಎಂ.ಶಿವಪ್ಪ ಶ್ರಮಿಸಿದ್ದಾರೆ.


ಸಹಾಯ ಹಸ್ತ ನೀಡಿವರು : ವಿ.ವಿ. ಬಿರಾದಾರ ರೂ. 30,000/-, ನಾಡಪ್ರಭು ಕೆಂಪೇಗೌಡ ಫೌಂಡೇಶನ್, ನವದೆಹಲಿ ರೂ. 25,000/-, ಓಂಕಾರ ಪಾಟೀಲ್ ರೂ.11,000/-, ಆನಂದ ಮುರಗೋಡ ರೂ. 10,000/, ಬಿ.ಎಸ್. ಕಲ್ಲೂರ ರೂ. 5,001/-, ಮಂಜುನಾಥ ಗೋಸಾಲ್ ರೂ. 5,000/- ಮತ್ತು ಬಿ.ಎಂ.ಸೋಮಶೇಖರ ಮತ್ತು ಮಕ್ಕಳು ರೂ.3,000/- ಮೌಲ್ಯದ ಮಾಸ್ಕ್‌ಗಳನ್ನು ನೀಡಿರುತ್ತಾರೆ.

ನಾಡಪ್ರಭು ಕೆಂಪೇಗೌಡ ಫೌಂಡೇಷನ್ ಅಧ್ಯಕ್ಷ ಬಿ.ಎಲ್. ಸುರೇಶ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಸಾಮಾಜಿಕ ಪ್ರಗತಿಶೀಲ ಸಂಸ್ಥೆಯ ಅಧ್ಯಕ್ಷ ವಿ.ವಿ. ಬಿರಾದಾರ, ಕಾರ್ಯದರ್ಶಿ ಅನಂದ ಮುರಗೋಡ ಅವರು ಸೇರಿದಂತೆ ಹಲವು ದೆಹಲಿ ಕನ್ನಡಿಗರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.






# ಡಾ. ಪಾಟೀಲ ಪುಟ್ಟಪ್ಪ, ಪ್ರೊ. ಚಂದ್ರಕಾಂತ ಕೂಸನೂರ ಹಾಗೂ ಕೆ.ಎಸ್. ನಿಸಾರ್ ಅಹಮದ್ ಅವರಿಗೆ ಶ್ರದ್ಧಾಂಜಲಿ



ಡಾ. ಪಾಟೀಲ ಪುಟ್ಟಪ್ಪ



ಕೆ.ಎಸ್. ನಿಸಾರ್ ಅಹಮದ್



ಚಂದ್ರಕಾಂತ ಕೂಸನೂರ

ಕನ್ನಡದ ಕಟ್ಟಾಳು, ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ದಿನಾಂಕ 16.03.2020ರಂದು ನಿಧನರಾಗಿದ್ದಾರೆ.

ದಿನಾಂಕ 18.04.2020ರಂದು ಖ್ಯಾತ ನಾಟಕಕಾರ, ಅಸಂಗತ ನಾಟಕಗಳಿಗೆ ಪ್ರಸಿದ್ಧರಾಗಿದ್ದ ಪ್ರೊ. ಚಂದ್ರಕಾಂತ ಕೂಸನೂರ ಅವರು ವಿಧಿವಶರಾಗಿದ್ದಾರೆ.

ನಿತ್ಯೋತ್ಸವ ಕವಿ, ಪದ್ಮಶ್ರೀ ಕೆ.ಎಸ್. ನಿಸಾರ್ ಅಹಮದ್ ಅವರು ದಿನಾಂಕ 03.05.2020ರಂದು ಇಹಲೋಕ ತ್ಯಜಿಸಿದ್ದಾರೆ.

ನಾಡು, ನುಡಿಗೆ ಅಪಾರ ಕೊಡುಗೆಗಳನ್ನು ನೀಡಿದ, ಕನ್ನಡ ಸಾರಸ್ವತ ಲೋಕದ ಈ ಮೂವರು ಮಹನೀಯರು ದೆಹಲಿ ಕರ್ನಾಟಕ ಸಂಘಕ್ಕೂ ಭೇಟಿ ನೀಡಿ ಇಲ್ಲಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು ಸ್ಮರಣೀಯ. ಅಗಲಿದ ಡಾ. ಪಾಟೀಲ ಪುಟ್ಟಪ್ಪ, ಪ್ರೊ. ಚಂದ್ರಕಾಂತ ಕೂಸನೂರ ಮತ್ತು ಪ್ರೊ. ಕೆ.ಎಸ್. ನಿಸಾರ್ ಅಹಮ್ಮದ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಶ್ರದ್ಧಾಂಜಲಿ.

# ದೆಹಲಿಯಲ್ಲಿ ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರ ಸಮಾವೇಶ



ದಿನಾಂಕ 01-12-2019 ರವಿವಾರ ಮತ್ತು 02-12-2019 ಸೋಮವಾರ, ಕಾನ್ಸ್ಟಿಟ್ಯೂಷನ್ ಕ್ಲಬ್ ದೆಹಲಿಯಲ್ಲಿ ಉತ್ತರ ಪ್ರದೇಶದ ಡಾ. ರಾಜಾ ಮಹೇಂದ್ರ ಪ್ರತಾಪಸಿಂಗ್‌ರ 133ನೇ ಜನ್ಮ ದಿನಾಚರಣೆ ಅಂಗವಾಗಿ, ಮಹಾನ್ ದೇಶಪ್ರೇಮಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆಯನ್ನು ಒಳಗೊಂಡ ಸವಿನೆನಪಿನ ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು.

ಈ ಸಮಾರಂಭಕ್ಕೆ ಕರ್ನಾಟಕದಿಂದ ಸುಮಾರು 180 ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅವರ ಕುಟುಂಬದವರು ಭಾಗವಹಿಸಿದ್ದರು. ಈ ಸಮಾರಂಭವು ಅಖಿಲ ಭಾರತ ಮಟ್ಟದಲ್ಲಿ ಹಮ್ಮಿಕೊಂಡಿದ್ದರಿಂದ ಪಂಜಾಬ, ಉತ್ತರಪ್ರದೇಶ, ಅಸ್ಸಾಂ, ಕರ್ನಾಟಕ, ಗುಜರಾತ್, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಮುಂತಾದ ರಾಜ್ಯದವರು ಭಾಗವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕಾರಣಕರ್ತರಾದರು.

ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರು ಭಾಗವಹಿಸುವವರಿದ್ದರು. ಕಾರಣಾಂತರಗಳಿಂದ ಭಾಗವಹಿಸಲಾಗದೆ ಸಂದೇಶವನ್ನು ಕಳುಹಿಸಿ ಕಾರ್ಯಕ್ರಮದ ಯಶಸ್ಸಿಗೆ ಶುಭ ಹಾರೈಸಿದರು.

ಸಂಘದ ಸದಸ್ಯರಾದ ಚೆನ್ನು ಎಸ್. ಮಠದ ಹಾಗೂ ವಿ.ವಿ. ಬಿರಾದಾರ ಭಾಗವಹಿಸಿ ಈ ಮಹತ್ತರ ಕಾರ್ಯಕ್ರಮದ ಶೋಭೆ ಹೆಚ್ಚಿಸಲು ಕಾರಣಕರ್ತರಾದರು.

*ಟಿ.ಕೆ.ಎಂ. ಬಸವರಾಜಯ್ಯ*

# ಕನ್ನಡಿಗರು ಎಂದೂ ಮರೆಯಲಾಗದ ಪಾಪು




**2015 ಜನವರಿ 24 ಮತ್ತು 25ರಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ದೆಹಲಿ ಕರ್ನಾಟಕ ಸಂಘವು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನೊಂದಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಏರ್ಪಡಿಸಿದ್ದ ಅಖಿಲ ಭಾರತ ಹೊರನಾಡ ಕನ್ನಡ ಸಂಘಗಳ ಐದನೇ ಮಹಾಮೇಳವನ್ನು ಪಾಟೀಲ ಪುಟ್ಟಪ್ಪ ಅವರು ಉದ್ಘಾಟಿಸುತ್ತಿರುವುದು.**

ಕರ್ನಾಟಕ ಏಕೀಕರಣದ ರೂವಾರಿ ನೃಪತುಂಗ ಪ್ರಶಸ್ತಿ ಪುರಸ್ಕೃತ ಶತಾಯುಷಿ ಪಾಟೀಲ ಪುಟ್ಟಪ್ಪ ಪತ್ರಿಕೋದ್ಯಮ, ಸಾಹಿತ್ಯ ರಚನೆ ಮತ್ತು ಕನ್ನಡ ಹೋರಾಟದಲ್ಲಿ ಗಣ್ಯರಾಗಿ 'ಪಾಪು' ಎಂದೇ ಪ್ರಸಿದ್ಧರಾಗಿದ್ದಾರೆ. ಅವರು ಈಚೆಗೆ ನಮ್ಮನ್ನು ಅಗಲಿದ್ದಾರೆ. ಇವರು ಹಾವೇರಿ ಜಿಲ್ಲೆಯ ಕುರುಬಗೊಂಡ ಗ್ರಾಮದಲ್ಲಿ ಸಿದ್ಧಲಿಂಗಪ್ಪ-ಮಲ್ಲಮ್ಮ ದಂಪತಿಗಳಿಗೆ 14-01-1922ರಲ್ಲಿ ಜನಿಸಿದರು. ಶಾಲಾ ಶಿಕ್ಷಣವನ್ನು ಹಲಗೇರಿ, ಬ್ಯಾಡಗಿ, ಚಿತ್ರದುರ್ಗ, ಹಾವೇರಿಗಳಲ್ಲಿ ಮುಗಿಸಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪದವಿ ಪೂರೈಸಿ ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಎಂ.ಎಂ.ಬಿ. ವ್ಯಾಸಂಗ ಮಾಡಿದರು. 1949ರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಎಂ.ಎಫ್.ಪಿ. ಪದವಿ ಗಳಿಸಿದರು.

ವಿಶಾಲ ಕರ್ನಾಟಕ ಪತ್ರಿಕೆ ಸಂಪಾದಕರಾಗಿ ಕೆಲಸ ಮಾಡಿದರು. 1954ರಲ್ಲಿ ಪ್ರಪಂಚ ವಾರಪತ್ರಿಕೆಯನ್ನು ತಾವೇ ಹುಟ್ಟು ಹಾಕಿದರು. 1957ರಲ್ಲಿ ಸಂಗಮ ಎಂಬ ಕನ್ನಡ ಡೈಜಸ್ಟನ್ನು ಪ್ರಾರಂಭಿಸಿದರು. 1959ರಲ್ಲಿ ವಿಶ್ವವಾಣಿ ದಿನಪತ್ರಿಕೆಯನ್ನೂ ಮನೋರಮಾ ಎಂಬ ಚಲನಚಿತ್ರ ಮಾಸಿಕವನ್ನೂ ಆರಂಭಿಸಿದರು. ಹೀಗೆ ಪತ್ರಿಕೆಗಳನ್ನು ಹುಟ್ಟು ಹಾಕುತ್ತಲೂ ನಡೆಸುತ್ತಲೂ ಪತ್ರಿಕೋದ್ಯಮದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದರು. ಇದಲ್ಲದೆ ಇತರ ಸಂಸ್ಥೆಗಳಲ್ಲಿ ಸಾರ್ವಜನಿಕ ರಂಗಗಳಲ್ಲಿ ದುಡಿದಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದರು. ರಾಜ್ಯ ಸಭೆಯ ಸದಸ್ಯರಾಗಿ (1962-74) ಧಾರವಾಡ ಮತ್ತು ಕರ್ನಾಟಕದ ಸಮಸ್ಯೆಗಳಿಗೆ ಧ್ವನಿಯಾದರು. ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ 1967ರಿಂದ ಇಂದಿನವರೆಗೂ ಅಧ್ಯಕ್ಷರಾಗಿದ್ದರು. ಕರ್ನಾಟಕ ಏಕೀಕರಣ ಹೋರಾಟದಲ್ಲಿ ಪಾಟೀಲ್ ಪುಟ್ಟಪ್ಪನವರು ಸಕ್ರಿಯವಾಗಿ ಭಾಗವಹಿಸಿದ್ದರು. 1949ರ ಆರಂಭದಲ್ಲಿ ಕಲಬುರಗಿಯಲ್ಲಿ ಕರ್ನಾಟಕ ಏಕೀಕರಣ ಪರಿಷತ್ತಿನಲ್ಲಿ ಮೈಸೂರು ಸಹಿತ ಕರ್ನಾಟಕವಾಗಬೇಕೆನ್ನುವ ಪಾಟೀಲ ಪುಟ್ಟಪ್ಪ ಮಂಡಿಸಿದ ಗೊತ್ತುವಳಿ ಕೋ. ಚೆನ್ನಬಸಪ್ಪನವರ ಅನುಮೋದನೆ ಪಡೆದು ಸ್ವೀಕೃತವಾಯಿತು. ಪಾಟೀಲ್ ಪುಟ್ಟಪ್ಪನವರು ಒಳಗೊಂಡ ಬಿ.ಎನ್. ದಾತಾರ್ ನೇತೃತ್ವದ ತಂಡದಿಂದ ಕರ್ನಾಟಕ ಏಕೀಕರಣಕ್ಕಾಗಿ ಮೈಸೂರಲ್ಲಿ ಸರದಾರ ಪಟೇಲರನ್ನು ಭೇಟಿ ಮಾಡಿದರು.

ಏಕೀಕರಣ ಹೋರಾಟ ಮಾತ್ರವಲ್ಲ, ಗೋಕಾಕ್ ಚಳುವಳಿ 1982ರಲ್ಲಿ ಗೋಕಾಕ ಹೋರಾಟದಲ್ಲಿ ನಾಯಕತ್ವ ವಹಿಸಿ ರಾಜ್ಯವ್ಯಾಪಿ ಹೋರಾಟ ಮಾಡಿದರು. ಆಂದೋಲನ, ಸಂಘಟನೆಯಿಂದ ಸರಕಾರ ಗೋಕಾಕ ವರದಿಯನ್ನು ಒಪ್ಪುವಂತೆ ಮಾಡಿದರು. 1985ರಲ್ಲಿ ಕರ್ನಾಟಕ ಸರಕಾರ ಕನ್ನಡ ಕಾವಲು ಹಾಗೂ ಗಡಿ ಸಲಹಾ ಸಮಿತಿ ರಚಿಸಿ, ಅಧ್ಯಕ್ಷರನ್ನಾಗಿ ಮಾಡಿದರು. 1992 ರಲ್ಲಿ ಅಖಿಲ ಕರ್ನಾಟಕ ಹೋರಾಟ ಸಂಘಗಳ ಒಕ್ಕೂಟದ ಅಧ್ಯಕ್ಷರಾಗಿದ್ದರು.

ಹೀಗೆ ನಾನಾ ರಂಗಗಳಲ್ಲಿ ಸೇವೆ ಸಲ್ಲಿಸಿರುವ ಇವರಿಗೆ ಹಲವಾರು ಪ್ರಶಸ್ತಿ ಗೌರವಗಳು ಸಂದಿವೆ. ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ 1994 ರಲ್ಲಿ ಡಿ'ಲಿಟ್' ಪದವಿ ಕೊಟ್ಟಿದೆ.

ಕರ್ನಾಟಕ ಸರಕಾರ ನೀಡುವ ಟಿ.ಎಸ್. ಆರ್. ಪ್ರಶಸ್ತಿ ಇವರಿಗೆ 1994ರಲ್ಲಿ ಲಭಿಸಿದೆ. 1976ರಲ್ಲಿ ರಾಜ್ಯ ಪ್ರಶಸ್ತಿ, 1990ರಲ್ಲಿ ವಿಶ್ವೇಶ್ವರಯ್ಯ ಭಾರತ ಜ್ಯೋತಿ ಪ್ರಶಸ್ತಿ, 1999ರಲ್ಲಿ ಹುಬ್ಬಳ್ಳಿಯ ತಿಲಕ್ ಮೊಹರೆ ಪ್ರಶಸ್ತಿ, 1996 ರಲ್ಲಿ ಹಂಪಿ ವಿಶ್ವವಿದ್ಯಾಲಯದ ನಾಡೋಜ ಗೌರವ, 2001 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ, 2002ರಲ್ಲಿ ಶಾಂತವೇರಿ ಗೋಪಾಲಗೌಡ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ 'ನೃಪತುಂಗ' ಪ್ರಶಸ್ತಿ ಇತ್ಯಾದಿ ಲಭಿಸಿವೆ. ಬೆಳಗಾವಿಯಲ್ಲಿ ನಡೆದ 70ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೌರವ 2003 ರಲ್ಲಿ ದೊರೆಕಿತು.



**ಡಾ. ಪಾಟೀಲ ಪುಟ್ಟಪ್ಪ**

ಪಾಟೀಲ ಪುಟ್ಟಪ್ಪನವರು ಕೇವಲ ಪತ್ರಕರ್ತರಲ್ಲ ಗ್ರಂಥಕರ್ತರೂ ಹೌದು. ಅವರು ಬರೆದ ಗ್ರಂಥಗಳಲ್ಲಿ ಕೆಲವು ಹೀಗಿವೆ: ನನ್ನದು ಈ ಕನ್ನಡ ನಾಡು, ನಮ್ಮದು ಈ ಭರತಭೂಮಿ, ಕರ್ನಾಟಕ ಕಥೆ, ಸೋವಿಯತ್ ದೇಶ ಕಂಡೆ, ಶಿಲಾಬಾಲಿಕೆ ನುಡಿದಳು, ನಮ್ಮ ದೇಶ ನಮ್ಮ ಜನ, ಈಗ ಹೊಸದನ್ನು ಕಟ್ಟೋಣ, ಪಾಪು ಪ್ರಪಂಚ.

ಪತ್ರಿಕೋದ್ಯಮ, ಸಾಹಿತ್ಯ ಮತ್ತು ಕನ್ನಡ ಹೋರಾಟದಲ್ಲಿ ಎತ್ತಿದ ಕೈ ಆಗಿದ್ದ ಪಾಟೀಲ್ ಪುಟ್ಟಪ್ಪನವರು 16-03-2020 ರಂದು ತಮ್ಮ 101 ನೇ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿದರು. ಅವರು ನಮ್ಮನ್ನು ಅಗಲಿದರೂ ಅವರ ಕನ್ನಡಪರ ಹೋರಾಟಗಳು ನಮಗೆ ಸದಾ ಸ್ಫೂರ್ತಿ ನೀಡಬಲ್ಲದು.

***ಚಂದ್ರಶೇಖರ ಜೋಳದರಾಶಿ***

# ಸಾಧನೆಯ ಬೆಳಕು ಚಂದ್ರಕಾಂತ ಕೂಸನೂರ

ಮಹಾನ್ ವ್ಯಕ್ತಿಯೆಂದು ಕರೆಸಿಕೊಳ್ಳಲು ಜೀವಿತಾವಧಿಯಲ್ಲಿ ಮಾಡಿದ ಸಾಧನೆಯ ಸಂಕಲನ ಆ ವ್ಯಕ್ತಿಯನ್ನು ಸದಾ ಜೀವಂತವಾಗಿಡುತ್ತವೆ. ಅಂತಹ ವ್ಯಕ್ತಿಗಳ ಸಾಲಿನಲ್ಲಿ ನಾಟಕಕಾರ ಪ್ರೊ. ಚಂದ್ರಕಾಂತ ಕುಸನೂರು ಒಬ್ಬರು. ಕುಸನೂರು ಈಚೆಗೆ ನಮ್ಮನ್ನು ಅಗಲಿದ್ದಾರೆ.

ಇವರು 1931 ಅಗಸ್ಟ್ 21ರಂದು ಗುಲ್ಬರ್ಗದಲ್ಲಿ ಜನಿಸಿದರು. ಹೈದರಾಬಾದ್ ಕರ್ನಾಟಕ ಪ್ರಾಂತದಲ್ಲಿ ಉರ್ದುವಿನಲ್ಲಿ ಪ್ರಥಾಮಿಕ ಶಿಕ್ಷಣ, ನಂತರ ಅಂಚೆ ತಿರುಪಿನ ಶಿಕ್ಷಣದ ಮೂಲಕ ಹಿಂದಿ ವ್ಯಾಸಂಗ ಮಾಡಿ ಶಿಕ್ಷಕ ವೃತ್ತಿಯನ್ನು ಆರಂಬಿಸಿದರು. ಮೈಸೂರು, ರಾಯಚೂರು, ಗುಲ್ಬರ್ಗ ಮತ್ತು ಮಹಾಗಾವ, ಸರ್ಕಾರಿ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾಗಿ ನಿವೃತ್ತರಾದರು. ಬಹುಮುಖ ಪ್ರತಿಭೆಯುಳ್ಳವರಾಗಿದ್ದು, ಚಿತ್ರಕಲೆ, ಸಾಹಿತ್ಯ, ರಂಗಭೂಮಿ ಕಲಾವಿದಾರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದರಯ, ಅವರ ನಾಟಕಗಳು, ಕಾಂಬರಿಗಳು, ಕಲಾಕೃತಿಗಳು ಮೆಚ್ಚುಗೆಗೆ ಪಾತ್ರವಾಗಿವೆ.

ಮೊದಲಿಗೆ ಹಿಂದಿಯಲ್ಲಿ ಕವಿತೆಯನ್ನು ಬರೆಯುತ್ತಿದ್ದ ಇವರ ಬರಹವನ್ನು ಗಮನಿಸುತ್ತಿದ್ದ ದ.ರಾ. ಬೇಂದ್ರೆಯವರು ಕನ್ನಡದಲ್ಲಿ ಬರೆಯಿರಿ ಎಂದು ಪ್ರೋತ್ಸಾಹಿಸಿದರು. ಕನ್ನಡದಲ್ಲಿ ಕಾದಂಬರಿ, ನಾಟಕವನ್ನು ಸಣ್ಣ ಕತೆಗಳನ್ನು ಬರೆಯಲು ಪ್ರಾರಂಬಿಸಿರುವ ಬಗ್ಗೆ ಸ್ವತಹ ಕುಸುನೂರವರೆ ಅವರ ಜೀವಿತ ಕಾಲದಲ್ಲಿ ಹೇಳಿಕೊಂಡಿದ್ದಾರೆ. ಜಪಾನಿನ ಹೈಕು ಭಾಷೆಯ ಕವಿತೆಗಳನ್ನು ಕನ್ನಡಕ್ಕೆ ಭಾಷಾಂತರಿಸಿದ ಮೊದಲಿಗರೆನ್ನಬಹುದಾಗಿದೆ. ಇವರು ಕಾದಂಬರಿಗಳಾದ ಕಿರೂರುನಾಮ ಮತ್ತು ಕೈಪಿಯಾ ಹಾಗೂ 10 ಪೂಣಾಂಕ ನಾಟಕಗಳು ಮತ್ತು ಹಲವಾರು ಅಸಂಗತ ನಾಟಕಗಳನ್ನು ಬರೆದರು. 'ವಿದೂಷಕ' ಎಂಬ ಅಸಂಗತ ನಾಟಕವು ತುಮಕೂರಿನ ವಿಶ್ವವಿದ್ಯಾಲಯದ ಪಠ್ಯ ಪುಸ್ತಕವಾಗಿರುವುದು ಪ್ರಸಂಶನೀಯ.



ಚಂದ್ರಕಾಂತ ಕೂಸನೂರ

ರಂಗಭೂಮಿ ಕಲಾವಿದರಾಗಿ "ರಂಗ ಮಾಧ್ಯಮ ಸಂಸ್ಥೆ" ಕಟ್ಟಿ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಮಾರಾಠಿಯಿಂದ ಕನ್ನಡಕ್ಕೆ ಕನ್ನಡದಿಂದ ಮಾರಾಠಿಗೆ ಆನೇಕ ಕಾದಂಬರಿಯನ್ನು ಭಾಷಂತರಗೊಳಿಸಿರುವುದು ಮತ್ತೊಂದು ವಿಶೇಷವಾಗಿರುತ್ತದೆ.

ಕುಸನೂರರ ರೇಖಾ ಚಿತ್ರ, ಜಲವರ್ಣ ತ್ಯೆಲ ಚಿತ್ರಗಳು ಜನರ ಮೆಚ್ಚುಗೆಗೆ ಪಾತ್ರವಾಗಿವೆ. ಇವರು ಅನೇಕ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಗೌರವ ಪ್ರಶಸ್ತಿ ಮತ್ತು ಪದ್ಯಸಂಕಲನ ರೇಷಂಕೀ ಗುಡಿಯಾ ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿರುವುದು ವಿಶೇಷ.

ಚಂದ್ರಕಾಂತ ಕೂಸನೂರು ಅವರ ನಾಟಕ "ಹಳ್ಳ ಕೊಳ್ಳ ನೀರು" ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಪ್ರದರ್ಶನಗೊಂಡಿತ್ತು. ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರ ನಿರ್ದೇಶನದಲ್ಲಿ ದೆಹಲಿಯ ದಿನಕರ ರಂಗತಂಡದಿಂದ ಪ್ರದರ್ಶನಗೊಂಡು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿರುವುದು ಸ್ಮರಣೀಯ.

ಚಂದ್ರಕಾಂತ ಕುಸನೂರರು ದಿನಾಂಕ 18.04.2020ರಲ್ಲಿ ತಮ್ಮ 90ನೇ ವಯಸ್ಸಿನಲ್ಲಿ ವಿಧಿವಶರಾಗಿರುತ್ತಾರೆ. ವ್ಯಕ್ತಿಯೊಬ್ಬ ಸಮಾಜಮುಖಿಯಾಗಿ, ಸಂಘ ಜೀವಿಯಾಗಿ ಜೀವಿತಾವಧಿಯಲ್ಲಿ ಯಾವುದೇ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆಗೈದರೆ ಇತಿಹಾಸದ ಪುಟದಲ್ಲಿ ಉಳಿಯಬಹುದಾಗಿದೆ ಎಂಬುದಕ್ಕೆ ಚಂದ್ರಕಾಂತ ಕುಸನೂರ ಅವರು ನಿದರ್ಶನ.

***ಎಸ್ ಕುಮಾರ್***



**ಶಿವಾನಂದ ಇಂಗಳೇಶ್ವರ ನಿರ್ದೇಶನದ ದೆಹಲಿಯ 'ದಿನಕರ' ತಂಡ ಪ್ರದರ್ಶಿಸಿದ ಚಂದ್ರಕಾಂತ ಕುಸನೂರು ಅವರ 'ಹಳ್ಳ ಕೊಳ್ಳ ನೀರು' ನಾಟಕದಲ್ಲಿ ಕಲಾವಿದರಾದ ಮಹಾದೇವ, ಎಸ್. ಕುಮಾರ್ ಮತ್ತು ಹರಿಪ್ರಿಯ (2016)**

# ಮರೆಯಾದ ನಿತ್ಯೋತ್ಸವ ಕವಿ



ಸಂವೇದನಾಶೀಲ ಹಾಗೂ ಜನಪ್ರಿಯ ಕವಿ ಪ್ರೊ. ಕೆ.ಎಸ್. ನಿಸಾರ್ ಅಹಮದ್ ಅವರು ದಿನಾಂಕ 03.05.2020ರಂದು ವಿಧಿವಶರಾಗಿದ್ದಾರೆ.

ಅವರು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಫೆಬ್ರವರಿ 5, 1936ರಲ್ಲಿ ಜನಿಸಿದರು. 1959ರಲ್ಲಿ ಭೂ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1994ರ ವರೆಗೆ ವಿವಿಧ ಸರಕಾರಿ ಕಾಲೇಜುಗಳಲ್ಲಿ ಅಧ್ಯಾಪಕ ಹಾಗು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಅವುಗಳಲ್ಲಿ ಮನಸು ಗಾಂಧಿ ಬಜಾರು ಹಾಗು ನಿತ್ಯೋತ್ಸವ ಇವು ಪ್ರಸಿದ್ಧ ಕವನ ಸಂಕಲನಗಳಾಗಿವೆ.

1978ರಲ್ಲಿ ಇವರ ಮೊದಲ ಭಾವಗೀತೆಗಳ ಧ್ವನಿಮುದ್ರಿಕೆ ನಿತ್ಯೋತ್ಸವ ಹೊರಬಂದು, ಕನ್ನಡ ಸುಗಮ ಸಂಗೀತ ಕ್ಷೇತ್ರದಲ್ಲಿ ಹೊಸ ಸಂಚಲನ ಮೂಡಿಸಿತು. 13 ಧ್ವನಿಸುರುಳಿಗಳ ಮೂಲಕ ಅವರು ರಚಿಸಿದ ಕವನಗಳು, ಗೀತೆಗಳು ಸಂಗೀತದೊಂದಿಗೆ ಪ್ರಚುರಗೊಂಡಿವೆ.

ಕುರಿಗಳು ಸಾರ್ ಕುರಿಗಳು, ರಾಜಕೀಯ ವಿಡಂಬನೆ ಕವನ. ಬೆಣ್ಣೆ ಕದ್ದ ನಮ್ಮ ಕೃಷ್ಣ ಕವನ ಕವಿಯ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿವೆ.

## ನನ್ನ ಕಾಲಘಟ್ಟದ ಪ್ರಮುಖ ಕವಿ



ಭೂವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ನಿಸಾರ್ ಅವರು ನನ್ನ ಬದುಕಿನ ಕಾಲಘಟ್ಟದ ಪ್ರಮುಖ ಕವಿಗಳಲ್ಲಿ ಒಬ್ಬರು. 21 ಕವನ ಸಂಕಲನಗಳು, 14 ವೈಚಾರಿಕೆ ಕೃತಿಗಳು, ಐದು ಮಕ್ಕಳ ಸಾಹಿತ್ಯ ಕೃತಿಗಳು, ಐದು ಅನುವಾದ ಕೃತಿಗಳು, ಮತ್ತು 13 ಸಂಪಾದನಾ ಗ್ರಂಥಗಳನ್ನು ಹೊರತಂದಿದ್ದ ಅವರು ತಮ್ಮ ನಿತ್ಯೋತ್ಸವ ಮತ್ತು ಬೆಣ್ಣೆ ಕದ್ದ ನಮ್ಮ ಕೃಷ್ಣ ಕವಿತೆಗಳಿಂದ ಜಗತ್ತಿನಾದ್ಯಂತ ಇರುವ ಎಲ್ಲ ಕನ್ನಡಿಗರ ಹೃದಯಕ್ಕೆ ಹತ್ತಿರವಾದರು. 'ಕುರಿಗಳು ಸಾರ್ ಕುರಿಗಳು' ಕವಿತೆಯನ್ನು ನಾವೆಲ್ಲ ಈಗಲೂ ಅಲ್ಲಲ್ಲಿ ಬಳಸುವುದುಂಟು.

ಮನಸು ಗಾಂಧಿ ಬಜಾರು, ಸಂಜೆ ಐದರ ಮಳೆ, ನಾನೆಂಬ ಪರಕೀಯ, ಮತ್ತು ಆಕಾಶಕ್ಕೆ ಸರಹದ್ದುಗಳಿಲ್ಲ ನನ್ನ ಇಷ್ಟದ ಸಂಕಲನಗಳು.

ಈಚೆಗೆ ಬಹಳ ಜನ ತೀರಿಕೊಂಡರು. ಬಹುಶ: ಇವತ್ತಿನ ಚಿಕ್ಕಟ್ಟುಗಳಲ್ಲಿ ಅನೇಕರಿಗೆ ಸರಿಯಾದ ಮದ್ದುಗಳು, ಆರೈಕೆ ದೊರೆಯುತ್ತಿಲ್ಲ ಎಂದು ತೋರುತ್ತದೆ.

ನಿಮಗೆ ನಮನಗಳು ಸಾರ್.

***ಡಾ. ಪುರುಷೋತ್ತಮ ಬಿಳಿಮಲೆ***

**ನಿಸಾರ್ ಅಹಮದ್ ಅವರ ಪ್ರಮುಖ ಕೃತಿಗಳು :**

ಮನಸು ಗಾಂಧಿ ಬಜಾರು (1960)
ನೆನೆದವರ ಮನದಲ್ಲಿ (1964)
ಸುಮಹೂರ್ತ (1967)
ಸಂಜೆ ಐದರ ಮಳೆ (1970)
ನಾನೆಂಬ ಪರಕೀಯ (1972)
ನಿತ್ಯೋತ್ಸವ (1976)
ಸ್ವಯಂ ಸೇವೆಯ ಗಿಳಿಗಳು (1977)
ಅನಾಮಿಕ ಆಂಗ್ಲರು(1982)
ನವೋಲ್ಲಾಸ (1994)
ಆಕಾಶಕ್ಕೆ ಸರಹದ್ದುಗಳಿಲ್ಲ (1998)
ಅರವತ್ತೈದರ ಐಸಿರಿ(2001)

**ಪ್ರಶಸ್ತಿ ಪುರಸ್ಕಾರಗಳು** :

ಮಾಸ್ತಿ ಪ್ರಶಸ್ತಿ (2006)
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
ಗೊರೂರು ಪ್ರಶಸ್ತಿ
ಅನಕೃ ಪ್ರಶಸ್ತಿ
ಪಂಪ ಪ್ರಶಸ್ತಿ
ರಾಜ್ಯೋತ್ಸವ ಪ್ರಶಸ್ತಿ (1981)
ನಾಡೋಜ ಪ್ರಶಸ್ತಿ (2003)
ಶಿವಮೊಗ್ಗದಲ್ಲಿ ನಡೆದ 73ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (2006).

# ಬೀಳ್ಕೊಡುಗೆ



ತಾಯ್ನಾಡಿಗೆ ತೆರಳುತ್ತಿರುವ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ರಾಜೇಂದ್ರ ಗೌಡ ಮತ್ತು ಅವರ ಪತ್ನಿ ಇವರನ್ನು ದಿನಾಂಕ 08.03.2020 ರಂದು ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಡಾ. ವೆಂಕಟಾಚಲ ಹೆಗಡೆ ಅವರು ಹೂಗುಚ್ಛ ಮತ್ತು ಸ್ಮರಣಿಕೆಯನ್ನು ನೀಡಿ ಆತ್ಮೀಯವಾಗಿ ಬೀಳ್ಕೊಟ್ಟರು.




ಬೆಂಗಳೂರಿಗೆ ವರ್ಗವಾಗುತ್ತಿರುವ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ವಿವೇಕನಾಂದ ರಾವ್ ಮತ್ತು ಅವರ ಪತ್ನಿ ಶ್ರೀಮತಿ ಸುಪ್ರಿಯಾ ರಾವ್ ಇವರನ್ನು ದಿನಾಂಕ 08.03.2020 ರಂದು ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಡಾ. ವೆಂಕಟಾಚಲ ಹೆಗಡೆ ಅವರು ಹೂಗುಚ್ಛ ಮತ್ತು ಸ್ಮರಣಿಕೆಯನ್ನು ನೀಡಿ ಆತ್ಮೀಯವಾಗಿ ಬೀಳ್ಕೊಟ್ಟರು.

## ಕರ್ಮದ ಹೊಸ್ತಿಲು



ಹಕ್ಕಿ ಹಾರುತ್ತಿದೆ. ಹಾವು ಹರಿದಾಡುತ್ತಿದೆ
ಇರುಳು ಬಾನಲ್ಲಿ ತಾರೆ ಮಿನುಗುತಿದೆ
ಚಿಗುರು ಬೆಳೆಯುತಿದೆ
ಬೆಳೆದವು ಅರಳುತಿದೆ
ಆದರೆ, ಹೆಜ್ಜೆ ಹೆಜ್ಜೆಗೂ
ಮನೆಯೊಳಗಿನ ಜೀವ
ಮೌನವ ಸೀಳ ನಡುಗುತ್ತಿದೆ!
ಮೀಸೆ ತಿರುಗಿಸುವ ಕೈಗಳು ಸೋತು ಹೋಗಿವೆ
ಜಾತಿ, ಧರ್ಮದ ರಾಕ್ಷಸ
ಗೊರಕೆ ಹೊಡೆಯುತಿದೆ
ಪೂಜೆ, ಹಬ್ಬ, ಜಾಗಟೆಯ ಶಬ್ದ
ನಿಂತೇ ಹೋಗಿವೆ
ಲೋಕದಲ್ಲಿ ಮೆರೆಯುತಿಹ
ಈ ಮಾರಿಯ ಕರಿನೆರಳಲ್ಲಿ
ಕೂಡಿಟ್ಟ ಕೊಪ್ಪರಿಗೆಯ
ಜೀವ ಉಳಸುತ್ತಿಲ್ಲ
ರೋಗದ ಭಯದಲ್ಲಿ
ದೂರದೂರಿಗೆ ಹೊಟ್ಟೆಪಾಡಿಗೆ
ಸೀಮೆ ದಾಟಿದವರು
ಗೂಡು ಸೇರಿದರು
ಹಳೆಯದ್ದು ಎಂದು ಒದ್ದ ಕಾಲಲ್ಲಿ
ಇಂದು ಬಲವೇ ಇಲ್ಲ!
ಖಾಲಿ ಒಲೆಯಲ್ಲಿ ಜೋರಾಗುತಿದೆ
ಬೆಂಕಿಯ ನರ್ತನ!
ಕಲಿಯುಗ ಕಲಿಯುಗ ಎಂದು
ಹೆಗಲು ದಾಟಿಸುವುದು ಬೇಡ
ಹೊತ್ತು ಮುಳುಗುವ ಮುನ್ನ
ಲೆಕ್ಕವಿಲ್ಲದ ಕರ್ಮದ ಹೊಸ್ತಿಲಲ್ಲಿ
ಧರ್ಮ, ದೇವರ ಎಚ್ಚಿಸಲಿ

***ಅರವಿಂದ ಬಿಜೈ***

*(ಕೊರೊನಾ ಸಂದರ್ಭದಲ್ಲಿ ವಿಧಿಸಲಾದ ದಿಗ್ಬಂಧನದ ಹಿನ್ನಲೆಯಲ್ಲಿ ಕವಿ ಅರವಿಂದ ಬಿಜೈ ತುಳು ಭಾಷೆಯಲ್ಲಿ ಬರೆದ ಕವನದ ಕನ್ನಡ ಅನುವಾದ)*

# ಪ್ರಗತಿಗೆ ಬೇಕು ಬದಲಾವಣೆ

ಜೀವನದಲ್ಲಿ "ಬದಲಾವಣೆ" ಎಂಬುದೊಂದೇ ನಿರಂತರ ನಡೆಯುತ್ತಿರುವ ಕ್ರಿಯೆ. ದಿನನಿತ್ಯ, ಪ್ರತಿಕ್ಷಣವೂ ಬದಲಾವಣೆ ನಡೆಯುತ್ತಲೇ ಇರುತ್ತವೆ. ಅದಕ್ಕಾಗಿಯೇ ಹೇಳುವುದು ಜೀವನ-ಸಮಾಜವೆಂದರೆ ನಿಂತ ನೀರರಂತಲ್ಲ. ಅದೊಂದು ಹರಿಯುವ ನದಿ.

ಇಂದು ಕಾಲಿಟ್ಟ ನೀರಿಗೆ ನಾಳೆ ಮತ್ತೆ ಕಾಲಿಡಲಾಗದು. ನಾಳೆ ಎಂಬುದು ಹೊಸತು. ಮನುಷ್ಯ ಪ್ರತಿ ಕ್ಷಣವೂ ಹೊಸ ಹೊಸ ವಿಚಾರಗಳನ್ನು ಅರಸುತ್ತಿರುತ್ತಾನೆ, ಹೊಸದರ ಕುರಿತು ಚಿಂತಿಸುತ್ತಿರುತ್ತಾನೆ. ಇದಕ್ಕೆಲ್ಲಾ ಕಾರಣ ಆತನಲ್ಲಿರುವ ಕುತೂಹಲ. ಈ ಕುತೂಹಲ ಎಷ್ಟರಮಟ್ಟಿಗೆಂದರೆ ದಿನನಿತ್ಯದ ಸಣ್ಣ ಸಣ್ಣ ಕೆಲಸ ಕಾರ್ಯಗಳಲ್ಲೂ ನಾವಿದನ್ನು ಗಮನಿಸಬಹುದು. ಉಡುಗೆ-ತೊಡುಗೆಗಳಲ್ಲಿ, ತಿಂಡಿ-ತಿನಿಸುಗಳಲ್ಲಿ, ಆಚಾರ-ವಿಚಾರಗಳಲ್ಲಿ, ಆಟ-ಪಾಠಗಳಲ್ಲಿ ಎಲ್ಲದರಲ್ಲೂ, ಎಲ್ಲೆಲ್ಲೂ ಈ ಬದಲಾವಣೆಗಳನ್ನು ನಾವು ಗಮನಿಸುತ್ತಾ ಹೋಗಬಹುದು.

ಹಾಗಾಗಿಯೇ ಜಗತ್ತು, ಬದುಕು, ಬೆಳೆಯುತ್ತಾ ಹೋಗುತ್ತದೆ. ದಿನದಿಂದ ದಿನಕ್ಕೆ ಹೊಸದಾಗುತ್ತಾ ಹೋಗುತ್ತದೆ. ಬದಲಾವಣೆ ಇಲ್ಲದೇ ಹೋಗಿದ್ದಲ್ಲಿ ಜೀವನ ಬೋರ್ ಎನಿಸಿ ಬಿಡುತ್ತಿತ್ತು. ಹೊಸ ಆವಿಷ್ಕಾರಗಳೇ ನಡೆಯುತ್ತಿರಲಿಲ್ಲ. ಎಲ್ಲವೂ ನಿಂತ ನೀರಾಗಿ ನಾರುತ್ತಿತ್ತು, ರಾಡಿಯಾಗುತ್ತಿತ್ತು. ಒಬ್ಬಾತ ದಿನದ ಒಂದು ಹೊತ್ತಿನಲ್ಲಿ ಬೇಸತ್ತು, ಸೋತು, ಸಾಕಾಗಿ ಕೂತರೂ ಮತ್ತೊಂದು ಘಳಿಗೆಯಲ್ಲಿ ಚೇತರಿಸಿಕೊಂಡು ಉತ್ಸಾಹದಿಂದ ಬದುಕನ್ನು ನೋಡುತ್ತಾನೆ ಮತ್ತೆ ಹೊಸ ಹೊಸ ಬದಲಾವಣೆಗಳನ್ನು ಮಾಡುತ್ತಾನೆ.

ಒಬ್ಬ ಸಾಮಾನ್ಯ ಕೃಷಿಕನೇ ಆಗಲಿ, ವಿದ್ಯಾರ್ಥಿಯೇ ಆಗಲಿ, ವ್ಯಾಪಾರಿಯೇ ಆಗಲಿ, ವಿಜ್ಞಾನಿಯೇ ಆಗಲಿ, ಕೈಗಾರಿಕಾ ಕಾರ್ಮಿಕನೇ ಆಗಲಿ ತನ್ನ ದೈನಂದಿನ ಜೀವನದಲ್ಲಿ ಹೊಸ ಹೊಸ ವಿಚಾರಗಳನ್ನು ಆಲೋಚಿಸಿ, ಅವುಗಳನ್ನು ನಿರಂತರವಾಗಿ ಆಚರಣೆಗೆ ತರುತ್ತಲೇ ಇರುವುದರಿಂದಾಗಿಯೇ ಜೀವನ, ಸಮಾಜ, ಜಗತ್ತು ಬೆಳೆಯುತ್ತಾ ಹೋಗುತ್ತಿದೆ. ಈ ಆವಿಷ್ಕಾರ, ಹೊಸತನ, ಬದಲಾವಣೆಗಳು ನಿಂತ ದಿನ ನಮ್ಮ ಜೀವನ-ಸಮಾಜ-ಜಗತ್ತು ಕೂಡಾ ನಿಂತು ಬಿಡುತ್ತವೆ. ಮನುಷ್ಯನ ಮೂಲಭೂತ ಗುಣಗಳಲ್ಲಿ ಒಂದಾದ ಹೊಸತನ್ನು ಬಯಸುವ, ಸೃಷ್ಟಿಸುವ ಮತ್ತು ಅದರಿಂದ ತೃಪ್ತನಾಗದೆ ಮತ್ತೆ ಮತ್ತೆ ಬದಲಾವಣೆಯನ್ನು ಮಾಡುತ್ತಾ ಹೋಗುವ ಈ ನಿರಂತರ ಕ್ರಿಯೆಯೇ ಸಮಾಜದ, ಜಗತ್ತಿನ, ಜೀವನದ ಮುನ್ನಡೆಗೆ ಕಾರಣವಾಗಿದೆ.

ನಮ್ಮ ಪೂರ್ವಜರು ಕಂಡು ಅನುಭವಿಸಿದ ಸತ್ಯಗಳನ್ನೇ ನಾವಿಂದು ಪರಿಶೀಲಿಸಿ, ಶೋಧಿಸಿ ಹೊಸದನ್ನು ಹುಡುಕಿದರೆ, ನಾಳೆಯ ನಮ್ಮ ಮುಂದಿನ ಜನಾಂಗ ನಾವು ಕಂಡುಂಡ ಅನುಭವಗಳ ಮೂಸೆಯಿಂದ ಇನ್ನೇನೋ ಹೊಸದನ್ನು ಕಂಡುಕೊಂಡು ಅನುಭವಿಸಿ ಆನಂದಿಸುತ್ತಾರೆ, ಅಚ್ಚರಿಪಡುತ್ತಾರೆ, ಕೈ ಸುಟ್ಟುಕೊಂಡು ಅಳುತ್ತಾರೆ, ತಿದ್ದಿಕೊಂಡು ಹೊಂದಾಣಿಕೆ ಮಾಡಿಕೊಳ್ಳುತ್ತಾರೆ ಇಲ್ಲವೇ ಅವರ ಪರಿಸ್ಥಿತಿ, ಕಾಲಕ್ಕನುಗುಣವಾದ ಹೊಸ ಬದಲಾವಣೆ ಮಾಡಿಕೊಳ್ಳುತ್ತಾ ಹೋಗುತ್ತಾರೆ. ಇದುವೇ ಜೀವನ ಇದು ಜೀವನ.

ಇದ್ದದ್ದೇ ಸಾಕು, ಅಪ್ಪ ನೆಟ್ಟ ಮರಕ್ಕೇ ನೇಣು ಹಾಕಿಕೊಳ್ಳೋಣ, ಹೊಸದನ್ನು ಕಲಿಯುವ, ಅರಸುವ, ಆವಿಷ್ಕಾರ ಮಾಡುವ ಕಷ್ಟ ಬೇಡ, ಬದಲಾವಣೆ ತುಂಬಾ ಕಷ್ಟದ್ದು ಎಂದೆಲ್ಲಾ ಮನುಷ್ಯ ಯೋಚಿಸಿ ಕುಳಿತಲ್ಲೇ ಸುಮ್ಮನೆ ಕುಳಿತಿದ್ದರೆ ನಮ್ಮ ಇಂದಿನ ಯಾವುದೆ ಹೊಸ ಹೊಸ ವಸ್ತುಗಳಾಗಲೀ, ವಿಚಾರಗಳಾಗಲೀ, ಅವಕಾಶಗಳಾಗಲೀ ನಮಗೆ ಇರುತ್ತಿರಲಿಲ್ಲ. ನಾವೆಲ್ಲರೂ ಬದುಕಿಯೂ ಸತ್ತವರಂತೆ ನಡೆದಾಡುವ ಶವಗಳಾಗಿರುತ್ತಿದ್ದೆವು. ಇಲ್ಲಾ ಅಯ್ಯೋ ಎಂದು ಅಳುತ್ತಾ ತಲೆಯ ಮೇಲೆ ಕೈಯಿಟ್ಟು ಕುಳಿತು ಬಿಡುತ್ತಿದ್ದೆವು.

ಓ ಬದಲಾವಣೆ ನೀನೆಷ್ಟು ಚಂದ, ಅರ್ಥಪೂರ್ಣ ಮತ್ತು ಜೀವಂತ!

***ಸಖಾರಾಮ ಉಪ್ಪೂರು***

# ರಾಜಧಾನಿಯಲ್ಲಿ ಕನಕದಾಸರ ರಾಷ್ಟ್ರೀಯ ಉತ್ಸವ




ನವದೆಹಲಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ ಮತ್ತು ಹೊಂಗಿರಣ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಮಳವಳ್ಳಿ ಆಶ್ರಯದಲ್ಲಿ ದಿನಾಂಕ 01.03.2020ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 'ದಾಸ ಶ್ರೇಷ್ಠ ಸಂತ ಕನಕದಾಸರ 532ನೇ ರಾಷ್ಟ್ರೀಯ ಜಯಂತೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಶ್ರೀಶ್ರೀಶ್ರೀ ಸಿದ್ಧರಾಮಾನಂದ ಪುರಿ ಮಹಾಸ್ವಾಮೀಜಿ ಅವರು ದಾಸಶ್ರೇಷ್ಠ ಕನಕದಾಸರ ಜಯಂತೋತ್ಸವವನ್ನು ವಿಧಿಯುಕ್ತವಾಗಿ ಚಾಲನೆ ಮಾಡಿ ಪೂಜೆ ಸಲ್ಲಿಸಿದರು. ನಂತರ ಪಲ್ಲಕ್ಕಿಯಲ್ಲಿ ದಾಸಶ್ರೇಷ್ಠ ಕನಕದಾಸರ ಭಾವಚಿತ್ರವನ್ನು ಪೂರ್ಣಕುಂಭ ಕಲಶ ಹಾಗೂ ಕರ್ನಾಟಕದ ವಿವಿಧ ಕಲಾತಂಡಗಳಾದ ವೀರಗಾಸೆ, ಪೂಜಾಕುಣಿತ, ಡೊಳ್ಳುಕುಣಿತ ಪ್ರದರ್ಶನದೊಂದಿಗೆ ಶ್ರೀ ರಾಘವೇಂದ್ರ ಸ್ವಾಮಿ ಮಠದಿಂದ ಸಂಘಕ್ಕೆ ಮೆರವಣಿಗೆಯೊಂದಿಗೆ ಕರೆತರಲಾಯಿತು.

ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಚಂದ್ರಕಾಂತ ಕಾವ್ಳೇಕರ್, ಸನ್ಮಾನ್ಯ ಉಪಮುಖ್ಯಮಂತ್ರಿ, ಗೋವಾ ಸರ್ಕಾರ, ಎಚ್.ಎಂ. ರೇವಣ್ಣ, ವಿಧಾನ ಪರಿಷತ್ ಸದಸ್ಯರು ಹಾಗೂ ಮಾಜಿ ಸಚಿವರು, ಡಾ. ಬಿ.ಎಸ್. ಶಿವಣ್ಣ, ಅಧ್ಯಕ್ಷರು, ಡಾ. ರಾಮಮನೋಹರ ಲೋಹಿಯ ವಿಚಾರ ವೇದಿಕೆ ಬೆಂಗಳೂರು, ಮಹಾದೇವ ಜಾನ್ಕರ್, ಮಾಜಿ ಸಚಿವರು, ವಿಧಾನ ಪರಿಷತ್ ಸದಸ್ಯರು, ಮಹಾರಾಷ್ಟ್ರ, ದಿನೇಶ್ ಮೆಹಾನೀಯ, ಶಾಸಕರು, ನವದೆಹಲಿ, ಎಚ್. ವಿಶ್ವನಾಥ, ಮಾಜಿ ಶಾಸಕರು, ಮಂತ್ರಿಗಳು, ಅಧ್ಯಕ್ಷರು, ಷೆಫರ್ಡ್ಸ್ ಇಂಟರ್ ನ್ಯಾಷನಲ್, ಸಿ.ಎಂ. ನಾಗರಾಜು, ಕರ್ನಾಟಕ ರಾಜ್ಯಾಧ್ಯಕ್ಷರು, ಷೆಫರ್ಡ್ಸ್ ಇಂಟರ್ ನ್ಯಾಷನಲ್, ಎಂ. ನಾಗರಾಜು, ಕನಾಟಕ ರಾಜ್ಯ ಉಪಾಧ್ಯಕ್ಷರು, ಷೆಫರ್ಡ್ಸ್ ಇಂಟರ್ ನ್ಯಾಷನಲ್, ಶ್ರೀಶ್ರೀಶ್ರೀ ಸಿದ್ಧರಾಮಾನಂದ ಪುರಿ ಮಹಾಸ್ವಾಮೀಜಿರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು ಹಾಗೂ ಆಚಾರ್ಯ ಡಾ. ನಾಗರಾಜ ಅವರು ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಗೌರವಾಧ್ಯಕ್ಷ ಡಾ. ಮುನಿರಾಜು ಅವರು ಮುಖ್ಯ ಅತಿಥಿಗಳನ್ನು, ವಿಶೇಷ ಉಪಸ್ಥಿತರನ್ನು ಹಾಗೂ ದೇಶದ ವಿವಿಧ ರಾಜ್ಯಗಳಿಂದ ಆಗಮಿಸಿದ ಮುಖಂಡರನ್ನು, ಪ್ರತಿನಿಧಿಗಳನ್ನು ಹಾಗೂ ದೆಹಲಿ ಕನ್ನಡಿಗರನ್ನು ಸ್ವಾಗತಿಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಅಧ್ಯಕ್ಷ ಮಹಾದೇವರವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ದೇಶದಲ್ಲಿರುವ ಸಮಾಜದ ಎಲ್ಲರನ್ನು ಒಗ್ಗೂಡಿಸಲು ಹಾಗೂ ವಿಶ್ವಗುರು ಬಸವಣ್ಣ, ಕನಕದಾಸರು ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಕರ್ನಾಟಕದ ಗಡಿಯಿಂದ ಹೊರಗೆ ಇಡೀ ದೇಶ ಹಾಗೂ ವಿಶ್ವಕ್ಕೆ ಪರಿಚಯಿಸುವ ಅವಶ್ಯಕತೆ ಇದೆ ಎಂಬುದನ್ನು ಅರಿತು ದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ ಹಾಗೂ ಹೊಂಗಿರಣ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರತಿಷ್ಠಾನ ಮಳವಳ್ಳಿ, ಈ ಕಾರ್ಯಕ್ರಮವನ್ನು ಆಯೋಜಿಸಿದೆ ಎಂದರು. ಕನಕದಾಸ, ಬಸವಣ್ಣ ಹಾಗೂ ಅಂಬೇಡ್ಕರ್ ಅವರ ವಿಚಾರಧಾರೆ ಮನುಕುಲದ ಏಳಿಗೆಗಾಗಿ ಇಂದಿಗೂ ಪ್ರಸ್ತುತ. ನಮ್ಮ ಸಮಾಜದ ಜನರು ಅವರು ಹಾಕಿಕೊಟ್ಟ ಮಾರ್ಗವನ್ನು ಅನುಸರಿಸಿ, ಸಮಾಜ ಹಾಗೂ ಇಡೀ ಮಾನವ ಸಂಕುಲದ ಅಭಿವೃದ್ಧಿಗಾಗಿ ಶ್ರಮಿಸೋಣ ಎಂದರು.

ಹಿಂದುಳಿದ ಗ್ರಾಮಾಂತರ ಪ್ರದೇಶಗಳಿಂದ ಉನ್ನತ ವ್ಯಾಸಂಗಕ್ಕಾಗಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ದೆಹಲಿಗೆ ಬರುವಂತಹ ಮಕ್ಕಳಿಗೆ ಅನುಕೂಲವಾಗುವಂತೆ ಉಳಿದುಕೊಳ್ಳಲು ವಸತಿಯನ್ನು ಕಲ್ಪಿಸಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸಹಾಯಕವಾಗಿ ನಿಲ್ಲಬೇಕಾಗಿದೆ ಎಂದರು.

ನಿರ್ದೇಶಕರು, ಕರ್ನಾಟಕ ಪ್ರದೇಶ ಕುರುಬರ ಸಂಘದ ಶ್ರೀಮತಿ ಪ್ರೇಮಲತ ಬಸವರಾಜ ಇವರು ಬಸವಣ್ಣ, ಕನಕದಾಸರು ಮತ್ತು ಅಂಬೇಡ್ಕರ್ ಅವರ ಸಾಮಾಜಿಕ ಚಿಂತನೆ ಮತ್ತು ಪರಿಕಲ್ಪನೆ ಬಗ್ಗೆ ಮಾತನಾಡಿದರು. ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ ಇಂದಿಗೂ ಮುಂದುವರಿದಿದೆ. ಈ ಸಮಾಜದ ಅಂಕುಡೊಂಕನ್ನು ತಿದ್ದಿ ಸಮ ಸಮಾಜದ ಪರಿಕಲ್ಪನೆ ಸಾಕಾರವಾಗಲು ತಳ ವರ್ಗದ ಜನರಲ್ಲಿ ಶಿಕ್ಷಣ, ಸಂಘಟನೆಯ ಅರಿವು ಮೂಡಿದರೆ ಮಾತ್ರ ಸಮ ಸಮಾಜ ಸಾಧ್ಯ ಎಂದು ತಿಳಿಸಿದರು.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರಿಗೆ 'ಕನಕರತ್ನ ರಾಷ್ಟ್ರೀಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.



















ಡಾ. ಸಿದ್ದರಾಮಣ್ಣ ಅವರು ಕರ್ನಾಟಕ ಸರ್ಕಾರದ ದಕ್ಷ ಆಡಳಿತಾಧಿಕಾರಿ. ಇವರು 'ಬಾಲ ಕಾರ್ಮಿಕ ಸಮಸ್ಯೆ ಮತ್ತು ಪರಿಹಾರಗಳು' ಎಂಬ ಸಂಶೋಧನಾ ಪ್ರಬಂಧಕ್ಕೆ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಇವರ ಸಜ್ಜನಿಕೆ, ಸ್ನೇಹಪರತೆ, ಸೇವಾಬದ್ಧತೆ, ಸೇವಾಮನೋಭಾವ, ಕಾರ್ಯದಕ್ಷತೆ ಮತ್ತು ಸಮುದಾಯದಲ್ಲಿನ ಸೇವೆಯನ್ನು ಗುರುತಿಸಿ 'ಕನಕರತ್ನ ರಾಷ್ಟ್ರೀಯ ಪ್ರಶಸ್ತಿ'ಯನ್ನು ನೀಡಿ ಸನ್ಮಾನಿಸಲಾಯಿತು.

ಸಮಾಜಸೇವಕ ಅನಂತರಾಮಯ್ಯ, ಅಮೇರಿಕದ ಇಂಡಿಯನ್ ಅಸೋಸಿಯೇಶನ್‌ನ ಅಧ್ಯಕ್ಷ ಕೆ.ಎನ್. ಸತೀಶ್ ಕಳೆದ ಹತ್ತಾರು ವರ್ಷಗಳಿಂದ ಸಮಾಜ ಸೇವೆಯಲ್ಲಿ ನಿರತರಾಗಿರುವ ಶ್ರೀಧರ್ ಅವರಿಗೂ 'ಕನಕರತ್ನ ರಾಷ್ಟ್ರೀಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

ಅಧ್ಯಕ್ಷ ಶಿವಣ್ಣನವರು ಮಾತನಾಡುತ್ತ, ಸಮಾಜದ ಒಳಿತಿಗಾಗಿ ನಾವೆಲ್ಲರೂ ಒಗ್ಗಟ್ಟಾಗಿ ಸೇರಿ, ದುಡಿದು ಉನ್ನತ ಸ್ಥಾನಕ್ಕೆ ಹೋಗೋಣ ಎಂದು ಆಶಿಸಿದರು. ದೇಶದ ವಿವಿಧ ಭಾಗದ ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ದೆಹಲಿಯ ಸ್ಥಳೀಯ ಕಲಾವಿದರಾದ ಕು. ಅವನಿ ನೆಲ್ಲಿ, ಕು. ಸಪ್ನಾ ಅತ್ತಾವರ್, ಕು. ರಮ್ಯ ಮಲ್ಲನಗೌಡ, ಶ್ರೀಮತಿ ಸವಿತಾ ನೆಲ್ಲಿ ಕನಕದಾಸರ ಕೀರ್ತನೆಗಳಿಗೆ ನೃತ್ಯರೂಪಕ ಪ್ರದರ್ಶನ ನೀಡಿದರು.

ರಮೇಶ ಮತ್ತು ತಂಡದವರಿಂದ ಶ್ರೀ ಕನಕದಾಸರ ನೃತ್ಯರೂಪಕ, ಜಗದೀಶ್ ಮೈಸೂರು ಮತ್ತು ತಂಡದಿಂದ ಪೂಜಾ ಕುಣಿತ, ಶ್ರೀಮತಿ ನಂದಿನಿ ಮತ್ತು ತಂಡದಿಂದ ಶಾಸ್ತ್ರೀಯ ನೃತ್ಯ, ರೂಪ ಮತ್ತು ತಂಡದಿಂದ ಜಾನಪದ ನೃತ್ಯ ಹಾಗೂ ಮಹೇಶ ಪ್ರಿಯದರ್ಶನ್ ತಂಡದಿಂದ ಜಾನಪದ ಗೀತಗಾಯನ ಸಾಂಸ್ಕೃತಿಕ ಕಾರ್ಯಕ್ರಮಗಳು ದೆಹಲಿ ಕನ್ನಡಿಗರ ಮನಸೆಳೆಯಿತು.

ಈ ಒಂದು ದಿನದ ಕನಕ ಜಯಂತೋತ್ಸವದಲ್ಲಿ ದೇಶದ ಎಲ್ಲ ರಾಜ್ಯಗಳಿಂದ ಪ್ರತಿನಿಧಿಗಳು, ಸಮುದಾಯದ ಮುಖಂಡರು ಭಾಗವಹಿಸಿದ್ದರು. ಕಾರ್ಯಕ್ರಮವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ ನೆರವೇರಿತು.

ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಲು ಡಾ. ರಾಮಮನೋಹರ ಲೋಹಿಯ ವಿಚಾರ ವೇದಿಕೆಯ ಪ್ರಧಾನ ಕಾರ್ಯದರ್ಶಿ, ಕೆ.ಪಿ.ಸಿ.ಸಿ., ಅಧ್ಯಕ್ಷರು, ಡಾ. ಬಿ.ಎಸ್. ಶಿವಣ್ಣ ಮತ್ತು ಇಲೆಕ್ಟ್ರಿಕಲ್ಸ್ ಮತ್ತು ಸಾರನ್ ಇನ್ಸುಲೇಟರ್ಸ್ ಪ್ರೈವೇಟ್ ಲಿಮಿಟೆಡ್‌ನ ಜಿ. ನರಸಿಂಹಮೂರ್ತಿ, ಪ್ರೊ. ಶ್ರೀಲಕ್ಷ್ಮೀನರಸಿಂಹ, ನವದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಎಲ್ಲಾ ಪದಾಧಿಕಾರಿಗಳು, ಹೊಂಗಿರಣ ಸಾಮಾಜಿಕ ಸಾಂಸ್ಕೃತಿಕ ಪ್ರತಿಷ್ಠಾನದ ಪದಾಧಿಕಾರಿಗಳು ಸಹಕರಿಸಿದರು.

ಕ್ರಾಂತಿವೀರ ಸಂಘದ ಕಾರ್ಯದರ್ಶಿ ಎಸ್.ಡಿ. ಶ್ರೀನಿವಾಸ್ ವಂದಿಸಿದರು.

***ಸುವರ್ಣ***

# ದಿಲ್ಲಿಯಲ್ಲಿ ವಿಶ್ವವಿದ್ಯಾಲಯ ಮಾದರಿಯ ಯಕ್ಷಗಾನ ಕೇಂದ್ರ ಸ್ಥಾಪನೆಗೆ ಆಗ್ರಹ

ಕರ್ನಾಟಕದ ಕರಾವಳಿಯಲ್ಲಿ ಜನಪ್ರಿಯವಾಗಿರುವ ಯಕ್ಷಗಾನ ಕಲೆ ವಿಶ್ವಮಟ್ಟದಲ್ಲಿ ಅಗ್ರಸ್ಥಾನ ಪಡೆದು ವಿಜ್ರಂಭಿಸಲು ರಾಷ್ಟ್ರದ ರಾಜಧಾನಿ ದಿಲ್ಲಿಯಲ್ಲಿ ಕರ್ನಾಟಕ ಸರ್ಕಾರ ಅಂತಾರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯ ಮಾದರಿಯ ಯಕ್ಷಗಾನ ಕೇಂದ್ರ ಸ್ಥಾಪಿಸಬೇಕು, ಮತ್ತು ಇಲ್ಲಿ ಆಸಕ್ತರಿಗೆ ತರಬೇತಿ ನೀಡಿ ವಿಶ್ವದ ಪ್ರಮುಖ ನಗರಗಳಲ್ಲಿ ಯಕ್ಷಗಾನ ಉತ್ಸವ ಏರ್ಪಡಿಸಬೇಕು. ಅಲ್ಲದೆ ಯಕ್ಷಗಾನಕ್ಕೆ ಸಂಬಂಧಿಸಿದ ಪ್ರಮುಖ ಯೋಜನೆಗಳನ್ನು ಕಾರ್ಯಗತಗೊಳಿಸಬೇಕೆಂದು ದೆಹಲಿ ಕನ್ನಡಿಗ, ತುಳುವೆರ್ ಪತ್ರಿಕೆಗಳ ಸಂಪಾದಕ, ಯಕ್ಷಗಾನ ವಿದ್ವಾಂಸ ಬಾ.ಸಾಮಗ ಅವರು ಈಚೆಗೆ ಆಗ್ರಹಪಡಿಸಿದ್ದಾರೆ.




ಸಾಮಗ ಅವರು ಶ್ರೀ ಮಹಾಗಣಪತಿ ಯಕ್ಷಗಾನ ಕಲಾಸಂಘ ಉಡುಪಿ ಸಮೀಪದ ಬೆಳ್ಕಳೆಯಲ್ಲಿ ಮಾ.೩ರಂದು ಏರ್ಪಡಿಸಿದ ಯಕ್ಷಗಾನ ಉತ್ಸವದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ದಿಲ್ಲಿಯಲ್ಲಿ ವಿಶ್ವದ ಗಮನ ಸೆಳೆಯಲು ಯಕ್ಷಗಾನ ಸಂಗ್ರಹಾಲಯ ಸ್ಥಾಪಿಸಿ, ಯಕ್ಷಗಾನ ಪ್ರಸಾರಕ್ಕಾಗಿ ಪ್ರತ್ಯೇಕ ದೂರದರ್ಶನ ಚಾನಲ್ ಆರಂಭಿಸಬೇಕೆಂದು ಬಾ. ಸಾಮಗ ಅವರು ಒತ್ತಾಯಿಸಿದರು.

ನಶಿಸುತ್ತಿರುವ ಡೇರೆ ಮೇಳಗಳ ಉಳಿವಿಗೆ ಸಬ್ಸಿಡಿ ನೀಡಬೇಕೆಂದರಲ್ಲದೆ ಪ್ರೇಕ್ಷಕರು ಯಕ್ಷಗಾನಕ್ಕೆ ಇನ್ನಷ್ಟು ಮಾರು ಹೋಗಲು ವಿಶ್ವದ ಮುಖ್ಯ ಭಾಷೆಗಳನ್ನು ಬಳಸಿಕೊಂಡು ಇತಿಮಿತಿಯಲ್ಲಿ ಕಲೆಗೆ ಸುಧಾರಣೆ ತರುವುದು ಅವಶ್ಯ ಎಂದು ಅವರು ಅಭಿಪ್ರಾಯಪಟ್ಟರು.



## ಯುಗಾದಿ ಆಗಲಿ ಸಂತಸದ ಬುನಾದಿ

ಶಾಂತಿಯುತ ಬದುಕಿಗಾಗಿ ಸ  
ರ್ವ ಜೀವಗಣಗಳ ಕ್ಷೇಮಕ್ಕಾಗಿ  
ರಿಪು ಗಣಗಳ ದುರ್ಗುಣಗಳನು ಧ್ವಂಸಮಾಡಿ  
ನಾಡು ನುಡಿ ನಡೆಗಳಲಿ  
ಮಮತೆ, ಅಕ್ಕರೆ ಪ್ರೀತಿಗಳನ್ನಳವಡಿಸಿಕೊಂಡು  
ಸಂಪದ್ಭರಿತರಾಗಿ ಗುರುವರೇಣ್ಯ  
ವರಿಷ್ಠರ ಮಾರ್ಗದರ್ಶನದಿಂದ ವಾ  
ತ್ಸಲ್ಯ ಭರಿತರಾಗಿ ಶಕ್ತಿಯುಕ್ತಿ ಇಂದ ಭೂಮಂಡಲದ  
ರಕ್ಷಣೆಗಾಗಿ ಅಳಲು ಸೇವೆ ಸಲ್ಲಿಸೋಣ  
ಯುಗ ಯುಗದ ಯುಗಾದಿ  
ಆಗಲಿ ಸಂತಸದ ಬುನಾದಿ

***ಡಾ. ಅಹಲ್ಯಾ ಚಿಂತಾಮಣಿ***

# ರಂಗ ಕಲಾವಿದ ಆರ್.ಎಸ್. ಶ್ಯಾಮಸುಂದರ್ ಇನ್ನಿಲ್ಲ

ದೆಹಲಿಯ ಕನ್ನಡ ರಂಗಭೂಮಿ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಕಲಾವಿದ ಆರ್.ಎಸ್. ಶ್ಯಾಮಸುಂದರ್ (55) ಅವರು ದಿನಾಂಕ 20.05.2020ರಂದು ವಿಧಿವಶರಾಗಿದ್ದಾರೆ. ಅವರು ದೆಹಲಿ ಪೋಲಿಸ್‌ನಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಪತ್ನಿ ರಂಗ ಕಲಾವಿದೆ ಶ್ರೀಮತಿ ಅಶ್ವಿನಿ ಬಿ.ಎಸ್., ಓರ್ವ ಪುತ್ರ, ಪುತ್ರಿ ಮತ್ತು ಬಂಧು ಬಳಗವನ್ನು ಅವರು ಅಗಲಿದ್ದಾರೆ.

ವೈವಿಧ್ಯಮಯ ಪಾತ್ರಗಳಲ್ಲಿ ಅಭಿನಯಿಸಿ ಗಮನ ಸೆಳೆದಿದ್ದ ಶ್ಯಾಮಸುಂದರ್ ಅವರು ರಂಗಕರ್ಮಿ ಶಿವಾನಂದ ಇಂಗಳೇಶ್ವರ ನಿರ್ದೇಶನದ 'ನಾ ಸತ್ತಿಲ್ಲ', ಮಂಜುನಾಥ ಬೆಳಕೆರೆ ನಿರ್ದೇಶನದ 'ಸೇವಂತಿ ಪ್ರಸಂಗ' ಮೊದಲಾದ ಹತ್ತು ಹಲವು ನಾಟಕಗಳಲ್ಲಿ ಸ್ಮರಣೀಯ ಪ್ರದರ್ಶನ ನೀಡಿದ್ದರು.




**ಖ್ಯಾತ ನಿರ್ದೇಶಕ ಸದಾನಂದ ಸುವರ್ಣ ಇವರಿಂದ ಬಹುಮಾನ ಸ್ವೀಕರಿಸುತ್ತಿರುವ ಶ್ಯಾಮಸುಂದರ್**

ದೆಹಲಿ ಕರ್ನಾಟಕ ಸಂಘದ ಕಲಾವಿದರು 2013ರಲ್ಲಿ ಮುಂಬಯಿ ಕರ್ನಾಟಕ ಸಂಘದ ನಾಟಕ ಸ್ಪರ್ಧೆಯಲ್ಲಿ ಟಿ.ಎಂ. ಮೈಲಾರಪ್ಪ ಅವರ ನಿರ್ದೇಶನದ 'ಕನಸು' ನಾಟಕ ಪ್ರದರ್ಶಿಸಿದ್ದರು. ಈ ನಾಟಕದಲ್ಲಿ ಅಭಿನಯಿಸಿ ಶ್ಯಾಮಸುಂದರ್ ಅವರು 'ವಿಶಿಷ್ಟ ನಟ' ಬಹುಮಾನ ಪಡೆದಿದ್ದರು.

ಶ್ಯಾಮಸುಂದರ್ 2013–15 ರ ಅವಧಿಯಲ್ಲಿ ದೆಹಲಿ ಕರ್ನಾಟಕ ಸಂಘದ ನಾಟಕ ಸಮಿತಿಯ ಸಂಚಾಲಕರಾಗಿದ್ದರು.

ಅಕಾಲಿಕವಾಗಿ ನಿಧನರಾದ ರಂಗ ಕಲಾವಿದ ಆರ್.ಎಸ್. ಶ್ಯಾಮಸುಂದರ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.





**'ಸೇವಂತಿ ಪ್ರಸಂಗ' ನಾಟಕದಲ್ಲಿ ಕಲಾವಿದೆ ಶ್ರೀಮತಿ ಮಂಜುಳಾ ನಾಗರಾಜ್ ಅವರೊಂದಿಗೆ ಆರ್.ಎಸ್. ಶ್ಯಾಮಸುಂದರ್**

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-

# ಕೊರೊನಾ ಸಂಕಷ್ಟ ಪೀಡಿತರಿಗೆ ನೆರವಾದ ಮಮತಾ ಗಿರಿಯಪ್ಪ

ದೆಹಲಿಯ ಪೆಹಲ್ ಸಂಸ್ಥೆಯ ಪಾಲುದಾರಳಾಗಿ ಮತ್ತು ಸಂಯೋಜಕಿಯಾಗಿ ಕನ್ನಡತಿ ಶ್ರೀಮತಿ ಮಮತಾ ಗಿರಿಯಪ್ಪ ಅವರು ಉತ್ತರ ಪಶ್ಚಿಮ ದೆಹಲಿಯಲ್ಲಿ ಕೊರೊನಾ ಸಂಕಷ್ಟ ಪೀಡಿತರಿಗೆ ಆಹಾರ ವಿತರಿಸಲು ನೆರವಾಗಿದ್ದಾರೆ. ಸುಮಾರು 4000 ಮಂದಿಗೆ ಜುಮ್ಯಾಟೋ ಮತ್ತು ಪೆಹಲ್ ನಡುವೆ ಸಮನ್ವಯ ಸಾಧಿಸಿ ಈ ಕಾರ್ಯವನ್ನು ಮಾಡಿದ್ದಾರೆ.

ಮೂಲತಃ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯವರಾದ ಮಮತಾ ಗಿರಿಯಪ್ಪ ಅವರು ಸೈನ್‌ಟೆಕ್ಸ್ಟ್ ಸೆಂಟರ್ ಆಫ್ ಎಕ್ಸಲೆನ್ಸ್‌ನಲ್ಲಿ ವ್ಯವಸ್ಥಾಪಕ ನಿರ್ದೇಶಕಿಯಾಗಿದ್ದಾರೆ.

ಕೊರೊನಾ ಸಂಕಷ್ಟ ಪೀಡಿತರಿಗೆ ನೆರವಾದ ಶ್ರೀಮತಿ ಮಮತಾ ಗಿರಿಯಪ್ಪ ಅವರ ಕೆಲಸ ಶ್ಲಾಘನೀಯ.

ಮಾರ್ಚ್ 25 ರಿಂದ ಸುಮಾರು 60 ದಿನಗಳ ಕಾಲ ಕೇಂದ್ರ ಸರಕಾರ ಕೊರೊನಾ ನಿಮಿತ್ತ ದೇಶದಾದ್ಯಂತ ದಿಗ್ಬಂಧನ (ಲಾಕ್‌ಡೌನ್) ವಿಧಿಸಿದ ಕಾರಣ ಏಪ್ರಿಲ್ ತಿಂಗಳ ಅಭಿಮತವನ್ನು ಪ್ರತ್ಯೇಕವಾಗಿ ಪ್ರಕಟಿಸಲು ಸಾಧ್ಯವಾಗಲಿಲ್ಲ. ಏಪ್ರಿಲ್ ಮತ್ತು ಮೇ ತಿಂಗಳ ಸಂಯುಕ್ತ ಸಂಚಿಕೆಯನ್ನು ದೆಹಲಿ ಕರ್ನಾಟಕ ಸಂಘದ ಸರ್ವ ಸದಸ್ಯರಿಗೆ ಮತ್ತು ಓದುಗರಿಗೆ ಈ ಮೂಲಕ ನೀಡುತ್ತಿದ್ದೇವೆ. ಅನಾನುಕೂಲತೆಗೆ ವಿಷಾದಿಸುತ್ತೇವೆ.
–ಸಂಪಾದಕ



ಮಮತಾ ಗಿರಿಯಪ್ಪ




ದಿನಾಂಕ 08.03.2020 ರಂದು ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ದೆಹಲಿಯ ಮಹಿಳೆಯರು ರಚಿಸಿದ ವಿವಿಧ ಬಗೆಯ ಚಿತ್ರಕಲೆಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು. ಆರಂಭದಲ್ಲಿ ದೀಪ ಬೆಳಗಿಸಿ ಪ್ರದರ್ಶನವನ್ನು ಉದ್ಘಾಟಿಸಲಾಯಿತು.

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

Ph : 40520770
M : 9811104398, 9811604398

Delhi Karnataka Sangha Abhimata
April - May-2020, Vol. No.30, Issue No.7-8, Price Rs.1/-
RNI Regn. No. 53405/91, DL-SW-1/4016/19-21
Date of Publication : May 8th / 9th, Posting Date :10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

